ಮೇಲೆ ಮಾತನಾಡಲು ಟೈಮ್ ಕೊಡಬೇಕು. ದಯವಿಟ್ಟು ಟೈಮ್ ಕೊಡಬೇಕು. ಇದು ಆರ್ಜೆಂಟ್ ಮ್ಯಾಟರ್ ಆಗಿರುವುದರಿಂದ ದಯವಿಟ್ಟು ದೊಡ್ಡ ಮನಸ್ಸು ಮಾಡಿ ಇದರ ಬಗ್ಗೆ ಚರ್ಚೆ ಮಾಡಲು ಟೈಮ್ ಕೊಡಿರಿ ಎಂದು ಬೇಳುತ್ತೇನೆ. ನಾನು ಇನ್ನೇನೂ ಹೇಳುವುದಿಲ್ಲ.

ಅಧ್ಯಕ್ಷರು.—ರೂಲ್ಸ್‌ನಲ್ಲಿ ಏನಿದೆ ಎಂದರೆ ''The Speaker may, under special circumstances'' ಎಂದು ಇದೆ. ಸ್ಪೆಷಲ್ ಸರ್ಕಂಸ್ಟೆನ್ಸಸ್ ಏನೆಂದರೆ, ನಿನ್ನೆ ಅವರು ಆಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದರು. ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಇವತ್ತು ಇಟ್ಟಿದ್ದೇನೆ. ನಿಮ್ಮದೂ ಕೂಡಾ ಆಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಈಗಿಂದ ಈಗಲೇ ಇಟ್ಟಿದ್ದೇನೆ. ಫಸ್ಟ್ ಇದೇ ಮ್ಯಾಟರ್ ತೆಗೆದುಕೊಂಡಿದ್ದೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಬಂದಿದ್ದರು. ಅವರಿಗೂ ಇದರ ಬಗ್ಗೆ ಹೇಳಿದ್ದೇನೆ. I have got highest regard for your Party. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಕರೆದು ಹೇಳಿದ್ದೇನೆ, ಟೈಮ್ ವೇಸ್ಟ್ ಮಾಡುವುದು ಬೇಡ. ಚೀಫ್ ಮಿನಿಸ್ಟರ್ ಉತ್ತರ ಹೇಳಲ್ಲಿ. ಅವರು ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಬೇಕಾದರೆ ಐದೈದು ನಿಮಿಷ ಕೇಳಿ ಎಂದು ಹೇಳಿದ್ದೇವೆ. ಅವರೂ ಯೆಸ್ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಸ್ವಲ್ಪ ಕೇಳಿ.

ಅಧ್ಯಕ್ಷರು.—ಸ್ವಲ್ಪನೂ ಇಲ್ಲ, ಏನೂ ಇಲ್ಲ. I have converted it into a calling Attention.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಅಧ್ಯಕ್ಷರೇ, ನಾಳೆ ರಂಜಾನ್ ಹಬ್ಬ ಇದೆ, ಎರಡೂ ಗುಂಪಿನವರಲ್ಲಿ ಘರ್ಷಣೆ ನಡೆದಿದೆ. ಕಾಲಿಂಗ್ ಅಟೆನ್‌ಷನ್ ಮೇಲೆ ಕ್ಲಾರಿಫಿಕೇಷನ್ ಕೇಳಬಹುದೇ ಹೊರತಾಗಿ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಆಗುವುದಿಲ್ಲ.

ಅಧ್ಯಕ್ಷರು.—ನೋಡಿ, ಚೀಫ್ ಮಿನಿಸ್ಟರ್‌ರವರು ಉತ್ತರ ಹೇಳಲಿ. ಆಮೇಲೆ ನಿಮಗೆ ಐದು ನಿಮಿಷ ಅವಕಾಶ ಕೊಡುತ್ತೇನೆ. ಕ್ಲಾರಿಫಿಕೇಷನ್ ಕೇಳಿ, ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಆಲ್ಲಿ ದುಖಾನುಗಳನ್ನು ಸುಟ್ಟಿದ್ದಾರೆ, ಮನೆಗಳನ್ನು ಸುಟ್ಟಿದ್ದಾರೆ ಸೈಕಲ್, ಮೋಟಾರ್ ಸೈಕಲ್‌ಗಳನ್ನು ಸುಟ್ಟಿದ್ದಾರೆ: ಫೋಲೀಸರು ಫೈರಿಂಗ್ ಮಾಡಿದ್ದಾರೆ. ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೇಳಿದ್ದೇವೆ. ದಯವಿಟ್ಟು ಅವಕಾಶ ಕೊಡಬೇಕು. ಕಾಲಿಂಗ್ ಅಟೆನ್‌ಷನ್‌ನಲ್ಲಿ ಇದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ಮುಖ್ಯಮಂತ್ರಿಗಳ ಗಮನ ಸೆಳೆಯಿರಿ.

## ಗಮನ ಸೆಳೆಯುವ ಸೂಚನೆ

1) ಶಿಡ್ಲಘಟ್ಟದಲ್ಲಿ ದಿನಾಂಕ 15-5-1988ರಂದು ಮರುಕಳಿಸಿದ ಮತೀಯ ಗಲಭೆಯಿಂದಾಗಿರುವ ಅನಾಹುತಗಳ ಬಗ್ಗೆ.

ಅಧ್ಯಕ್ಷರು.—ವೆಂಕಟರಾಮಯ್ಯನವರು ಗಮನ ಸೆಳೆಯಲ್ಲಿ ಆಮೇಲೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಇಲ್ಲ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಯಲ್ಲಿ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ಇಲ್ಲ. ಆಗುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರೇ ತಾವು ಗಮನ ಸೆಳೆಯಿರಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ದಿನಾಂಕ ೧೫-೫-೧೯೮೮ರಂದು ಪುರಸಭೆಯಿಂದ ಮಾತೆಯ ಗಲಭೆಯಿಂದ ಆಗಿರುವ ಅನಾಹುತಗಳ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

(ಗೊಂದಲ)

ಶ್ರೀ ಪಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ತಾವು ಡಿಸ್‌ಕಷನ್‌ಗೆ ಅವಕಾಶ ಮಾಡಿ ಕೊಟ್ಟರೆ ಸಂಪೂರ್ಣ ವಿಷಯ ಹೇಳಬಹುದು.....

(ಗೊಂದಲ)

ಅಧ್ಯಕ್ಷರು.—ಅವರು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದಾರೆ.

(ಗೊಂದಲ)

ಅಧ್ಯಕ್ಷರು,—ತಾವು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಲಿ. ಆಮೇಲೆ ತಾವುಗಳು ಕ್ಲಾರಿಫಿಕೇಷನ್ ಕೇಳುವುದಕ್ಕೆ ಐದೈದು ನಿಮಿಷ ಅವಕಾಶ ಮಾಡಿ ಕೊಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಶಿಡ್ಲಘಟ್ಟದಲ್ಲಿ ಹಿಂದು ಮುಸ್ಲೀಂ ಸಮಾನ ಸಂಖ್ಯೆಯಲ್ಲಿದ್ದಾರೆ. ಶಿಡ್ಲಘಟ್ಟದಲ್ಲಿ ಆಗಾಗ್ಗೆ ಎರಡೂ ಕೋಮಿನ ವ್ಯಕ್ತಿಗಳ ನಡುವೆ ಸಣ್ಣ ಪುಟ್ಟ ವೈಯ್ಯಕ್ತಿಕ ಜಗಳಗಳಾಗಿದ್ದು ಕೋಮಿನ ಗಲಭೆಯ ಸ್ವರೂಪ ಪಡೆದಿರುತ್ತೆ. ಆದರೆ ಸ್ಥಳೀಯ ಪೋಲೀಸರು ತುರ್ತು ಕ್ರಮ ಜರುಗಿಸಿ ಸಕಾಲದಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತಂದು ಕೋಮು ಗಲಭೆಗಳಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ಆದರೆ ಕೆಲವೊಮ್ಮೆ ಇಂತಹ ಘಟನೆಗಳು ಹತೋಟಿ ಮೀರಿ ದೊಡ್ಡ ಪ್ರಮಾಣದ ಕೋಮು ಗಲಭೆಗಳಾಗಿದ್ದು ಎಲ್ಲರಿಗೂ ತಿಳಿದಿರುವ ವಿಷಯ. ಹಿಂದಿನ ವರ್ಷ ಮೇ ತಿಂಗಳಲ್ಲಿ ಮಾರಮ್ಮ ದೇವತೆಯ ಜಾತ್ರೆ ಸ್ಥಳೀಯ ದರ್ಗಾದ ಮುಂದೆ ಹೋಗಬೇಕಾದರೆ ಗಲಭೆಗಳಾಗಿ ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಮತ್ತು ಬೆತ್ತ ಪ್ರಹಾರ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. ಈ ವರ್ಷ ಏಪ್ರಿಲ್ ೨ ಮತ್ತು ೩ನೇ ತಾರೀಕಿನ ಮಧ್ಯ ರಾತ್ರಿಯಲ್ಲಿ ಕರಗದ ಮೆರವಣಿಗೆ ಸಂದರ್ಭದಲ್ಲಿ ಸ್ಥಳೀಯರಿಂದ ಮತೀಯ ಮುಂದೆ ಗಲಭೆಗಳಾಗಿವೆ. ಈ ಕೋಮಿನ ಗಲಭೆಗಳು ಅಕ್ಕಪಕ್ಕದ ಹಳ್ಳಿಗಳಿಗೂ ಸಹ ಹರಡಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. ಕೋಮು ಸೌಹಾರ್ದ ಸಭೆಗಳನ್ನು ಮಾಡಿದ ನಂತರವೂ ಸಹ ಇಂತಹ ಘಟನೆಗಳು ನಡೆದಿದ್ದು ದುರಾದೃಷ್ಟಕರ.

ದಿನಾಂಕ ೧೫-೫-೧೯೮೮ರಂದು ಮಧ್ಯಾಹ್ನ ೧೨-೩೦ ಘಂಟೆಯ ಸಮಯದಲ್ಲಿ ಮುಸಲ್ಮಾನ ಹುಡುಗ ಮುನ್ನಾ ಎಂಬುವನು ಪಾರಂಪಟ್ಟಿಯಿಂದ ಮಾಂಸವನ್ನು ತರುತ್ತಿದ್ದಾಗ, ಕೆಲವು ಹಿಂದೂಗಳು ವಾಸವಿ ಬೀದಿಯಲ್ಲಿ ಆತನನ್ನು ಹೊಡೆದಿರುತ್ತಾರೆ. ಏಟು ತಿಂದ ಮುನ್ನಾ ತನ್ನ ಓಣಿಗೆ ಹೋಗಿ ವಿಷಯವನ್ನು ಮುಸಲ್ಮಾನ ಭಾಂಧವರಿಗೆ ತಿಳಿಸಿದಾಗ ಎರಡೂ ಕಡೆಯವರು ದೊಡ್ಡ ಪ್ರಮಾಣದಲ್ಲಿ ನೆರೆದು ಒಬ್ಬರ ಮೇಲೊಬ್ಬರು ಕಲ್ಲೆಸೆತದಲ್ಲಿ ತೊಡಗಿರುತ್ತಾರೆ. ಸುದ್ದಿ ತಿಳಿದ ಪೋಲೀಸರು ಮಧ್ಯ ಪ್ರವೇಶಿಸಿ ಆಶ್ರುವಾಯು ಮತ್ತು ಬೆತ್ತ ಪ್ರಹಾರ ಮಾಡಿದರೂ ಸಹ ಪರಿಸ್ಥಿತಿ ಹತೋಟಿಗೆ ಬರದಿದ್ದ ಕಾರಣ ಸಬ್ ಇನ್ಸ್‌ಪೆಕ್ಟರ್‌ರವರು ತಮ್ಮ ರಿವಾಲ್ವರಿನಿಂದ ಗಾಳಿಯಲ್ಲಿ ೫ ಗುಂಡು ಹಾರಿಸಿದರು ಇದೂ ಸಹ ಪರಿಣಾಮಕಾರಿಯಾಗಲಿಲ್ಲವಾದ್ದರಿಂದ ಪೋಲೀಸರು ದೊಂಬಿಯಲ್ಲಿ ತೊಡಗಿದ್ದ ಎರಡೂ ಗುಂಪುಗಳ ಮೇಲೆ ೧೩ ಸುತ್ತು ಗೋಲೀಬಾರ್ ಮಾಡಲಾಗಿ ಈ ಕೆಳಕಂಡವರಿಗೆ ಗುಂಡೇಟಿನಿಂದ ಗಾಯಗಳಾಗಿವೆ.

೧) ಶ್ರೀ ಜಗದೀಶ, ತಂದೆ ಬಸಪ್ಪ, ೨೫ ವರ್ಷ
೨) ಶ್ರೀ ಎಸ್. ಬಲರಾಮ್, ತಂದೆ ಸೀತಾರಾಮಯ್ಯ, ೩೫ ವರ್ಷ
೩) ಶ್ರೀ ಎ.ಆರ್. ಬಾಬು, ತಂದೆ ರಹೀಂ ಸಾಬಿ, ೨೫ ವರ್ಷ
೪) ಶ್ರೀಮತಿ ಬಿ.ಕೆ, ಅನಿತಾ ಕೋಂ ಪ್ರಕಾಶ್, ೨೦ ವರ್ಷ
೫) ಶ್ರೀ ಬಿ ಮೋಹಿದ್ದೀನ್, ತಂದೆ ತಾಜ್‌ಪೀರ್, ೨೫ ವರ್ಷ
೬) ಶ್ರೀ ಭಕ್ಷಿ, ತಂದೆ ರಷೀದ್, ಸಾಬ್, ೩೦ ವರ್ಷ

ಗಾಯಗೊಂಡ ಮೇಲ್ಕಂಡ ೬ ಮಂದಿಯನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾ ಸೇರಿಸಲಾಗಿದೆ.

ಕಲ್ಲೆಸೆತದಿಂದ ೧೨ ಮಂದಿ ಮತ್ತು ಬೆತ್ತ ಪ್ರಹಾರದಲ್ಲಿ ಏಟು ತಿಂದ ೧೩ ಮಂದಿಯನ್ನು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಗಿದೆ.

ಕೋಲಾರ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಮಧ್ಯಾಹ್ನ ೨–೩೦ ಘಂಟೆಗೆ ಅಧಿಕ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿ ಹಲವಾರು ಕಡೆ ಹಿಂಸಾಕೃತ್ಯದಲ್ಲಿ ತೊಡಗಿದ್ದ ಜನರ ಮೇಲೆ ಬೆತ್ತ ಪ್ರಹಾರ ಮಾಡಿ ಚದುರಿಸಿರುತ್ತಾರೆ. ಸ್ಥಳದಲ್ಲಿ ಶಾಂತಿ ಸ್ಥಾಪಿಸುವ ಉದ್ದೇಶದಿಂದ ಕೋಲಾರ ಜಿಲ್ಲೆಯ ಹಲವಾರು ಕಡೆಯಿಂದ ಮತ್ತು ಬೆಂಗಳೂರು ಜಿಲ್ಲೆಯಿಂದಲೂ ಪೋಲೀಸ್ ಸಿಬ್ಬಂದಿಯನ್ನು ಶಿಡ್ಲಘಟ್ಟಕ್ಕೆ ಕರೆಸಲಾಯಿತು. ಸಾಯಂಕಾಲ ಹದಗೆಟ್ಟ ಪರಿಸ್ಥಿತಿಯನ್ನು ಹತೋಟಿಗೆ ತರುವ ಸಲುವಾಗಿ ಮೂರು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಈ ಸಂಬಂಧ ಪೋಲೀಸರು ಇಲ್ಲಿಯವರೆಗೆ ೧೯೯ ಜನರನ್ನು ದಸ್ತಗಿರಿ ಮಾಡಲಾಗಿ ಅದರಲ್ಲಿ ೧೧೪ ಮಂದಿ ಮುಸಲ್ಮಾನರು ಮತ್ತು ೮೫ ಮಂದಿ ಹಿಂದೂಗಳಾಗಿದ್ದಾರೆ. ಬೆಂಕಿ ಪ್ರಕರಣವನ್ನು ಆರಿಸಲು ಮೂರು ಅಗ್ನಿಶಾಮಕ ದಳಗಳನ್ನು ನಿಯೋಜಿಸಲಾಗಿದೆ. ಸಂಜೆ ೫ ಘಂಟೆಗೆ ಪರಿಸ್ಥಿತಿಯನ್ನು ಹತೋಟಿಗೆ ತಂದು ನಿಷೇದಾಜ್ಞೆಗಳನ್ನು ಜಾರಿ ಮಾಡಲಾಗಿದೆ, ಬೆಂಗಳೂರು ವಿಭಾಗದ ಡಿ.ಐ.ಜಿ.ಪಿ.ಯವರು ಸ್ಥಳದಲ್ಲಿ ಹಾಜರಿದ್ದು ಉಸ್ತುವಾರಿ ವಹಿಸಿಕೊಂಡಿರುತ್ತಾರೆ.

ದಿನಾಂಕ ೧೫–೬–೮೭ರ ಮಧ್ಯರಾತ್ರಿ ಶಿಡ್ಲಘಟ್ಟ ಹೊರವಲಯದಲ್ಲಿರುವ ಹನುಮಂತಪುರ ಗ್ರಾಮದಲ್ಲಿ ಸುಮಾರು ೩೦ರಿಂದ ೪೦ ಹಿಂದೂಗಳು ಅದೇ ಊರಿನ ಸರ್ದಾರ ಎಂಬುವವರ ಕೋಳಿ ಫಾರಂಗೆ ನುಗ್ಗಿ ಲುಕ್ಸಾನು ಮಾಡಿ ಕೋಳಿಗಳನ್ನು ಒಯ್ದಿರುತ್ತಾರೆ, ಸುದ್ದಿ ತಿಳಿದ ಪೋಲೀಸರು ಸ್ಥಳಕ್ಕೆ ಧಾವಿಸಿ ೨೪ ದುಷ್ಕರ್ಮಿಗಳನ್ನು ದಸ್ತಗಿರಿ ಮಾಡಿ ಕೋಮು ಗಲಭೆ ಹಳ್ಳಿಗಳಿಗೆ ಹರಡದಂತೆ ಮುಂಜಾಗ್ರತೆ ಕ್ರಮ ತೆಗೆದು ಕೊಂಡಿರುತ್ತಾರೆ.

ಗಲಭೆಗಳಲ್ಲಿ ೩೬ ಪಕ್ಕಾ ಮನೆಗಳಿಗೆ ನಷ್ಟವಾಗಿ ೨೨ ಗುಡಿಸಲುಗಳು ಸುಟ್ಟು ಹೋಗಿವೆ. ಎರಡು ದೊಡ್ಡ ದಿನಸಿ ಅಂಗಡಿಗಳು ಮತ್ತು ೧೦ ಚಿಲ್ಲರೆ ಅಂಗಡಿಗಳಲ್ಲಿ ಲೂಟಿಯಾಗಿದೆ. ಒಂದು ಕಾರ್ಖಾನೆ, ಎರಡು ದ್ರಾಕ್ಷಿ ತೋಟಗಳಿಗೆ ಲುಕ್ಸಾನು ಉಂಟಾಗಿದೆ. ಎರಡು ಸ್ಕೂಟರ್‌ಗಳು ಒಂದು ಮೋಟಾರ್ ಸೈಕಲ್ ಮತ್ತು ಹಲವಾರು ಸೈಕಲ್‌ಗಳನ್ನು ಸುಡಲಾಗಿದೆ. ಈ ಜಿಲ್ಲೆಯ ಪ್ರಕರಣಗಳು ಹಾಗೂ ಬೆಂಕಿಯಂ ಪ್ರಕರಣಗಳಲ್ಲಿ ಉಂಟಾದ ನಷ್ಟ ಸುಮಾರು ೬ ಲಕ್ಷ ರೂಗಳೆಂದು ಅಂದಾಜು ಮಾಡಲಾಗಿದೆ. ನಷ್ಟಕ್ಕೆ ಒಳಗಾದ ಅಮಾಯಕ ಜನರಿಗೆ ಸೂಕ್ತ ಪರಿಹಾರ ಕೊಡಲಾಗುವುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಅನಾಹುತದಿಂದ ಆಗಿರುವ ನಷ್ಟ ಈಗಿನ ಅಂದಾಜಿನ ಪ್ರಕಾರ ಸುಮಾರು ೧೫ ಲಕ್ಷ ರೂಪಾಯಿಗಳೆಂದು ಹೇಳಲಾಗಿದೆ. ಜೊತೆಗೆ ಅಲ್ಲಿ ಪರಿಸ್ಥಿತಿ ಶಾಂತವಾಗಿದೆಯೆಂದು ವರದಿಯಾಗಿದೆ. ಈಗ ನಾನು ಇನ್ನೂ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಈ ಊರಿನಲ್ಲಿ ಮತ್ತು ಸುತ್ತ ಮುತ್ತಲ ಊರುಗಳಲ್ಲಿ ಕಳೆದ ಒಂದೂವರೆ ವರ್ಷದಿಂದ ಒಂದು ರೀತಿ ಅತ್ಯಂತ ಟೆನ್‌ಷನ್ ವಾತಾವರಣ ಇದೆ. ಹಿಂದೂಗಳ ಹಬ್ಬ ಆದಾಗ ಮತ್ತು ಮುಸ್ಲಿಮರ ಹಬ್ಬ ಆದಾಗ ವಾತಾವರಣ ಮತ್ತು ಬಿಗಿಯಾಗುತ್ತಿತ್ತು. ಅಲ್ಲಿಯ ಸ್ಥಳೀಯ ಶಾಸಕರು ಪ್ರಕ್ಷುಬ್ಧ ಪರಿಸ್ಥಿತಿ ಉಂಟಾದ ಎರಡೂ ಕೋಮಿನ ಜನರುಗಳನ್ನು ಕರೆದು ಮಾತನಾಡಿ ಜಗಳಗಳನ್ನು ಮಾಡದಂತೆ ತಡೆಗಟ್ಟುತ್ತಿದ್ದರು. ಮಾನ್ಯ ಶಾಸಕರು ಸ್ತುತ್ಯವಾದ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಮೊನ್ನೆ ಆದ ಘಟನೆಯಲ್ಲೂ ಕೂಡ ಎರಡೂ ಕೋಮಿನ ಮುಖಂಡರುಗಳನ್ನು ಕರೆಸಿ ಮಾತನಾಡಿ ಶಾಂತಿ ಸ್ಥಾಪನೆಗೆ ಸಹಾಯ ಮಾಡಿದ್ದಾರೆ. ಇಂದು ಬೆಳಿಗ್ಗೆ ನಮ್ಮ ಸರ್ಕಾರದ ವತಿಯಿಂದ ಶ್ರೀಮಾನ್ ಮೊಯಿನುದ್ದೀನ್‌ರವರು ಮತ್ತು ಗೃಹ ಖಾತೆಯ ರಾಜ್ಯ ಸಚಿವರಾದ ಶ್ರೀ ವೀರಣ್ಣನವರು ಅಲ್ಲಿಗೆ ಹೋಗಿದ್ದಾರೆ. ಜೊತೆಗೆ ಅಲ್ಲಿನ ಮತ ಕ್ಷೇತ್ರದವರಾದ ಶ್ರೀ ಕೃಷ್ಣಾರೆಡ್ಡಿಯವರೂ ಸಹ ಹೋಗಿದ್ದಾರೆ. ಇವರುಗಳು ಅಲ್ಲಿನ ಜನರ ಜೊತೆ ಅಂದರೆ ಎರಡೂ ಕೋಮಿಗೆ ಸೇರಿದ ಜನರ ಜೊತೆ ಮಾತನಾಡಿ ಯಾವ ರೀತಿ ನೊಂದವರಿಗೆ ಮತ್ತು ಲುಕ್ಸಾನಾದವರಿಗೆ ಪರಿಹಾರ ಕೊಡಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತಾರೆ. ನಾನು ನಿನ್ನೆಯ ದಿವಸವೇ ಒಂದು ವಿಷಯವನ್ನು ಪ್ರಕಟ ಮಾಡಿದ್ದೆ. ಹಿಂದೂಗಳಿಗೆ ಯಾವ ರೀತಿ ದೀಪಾವಳಿ ಹಬ್ಬವು ದೊಡ್ಡದೋ ಅದೇ ರೀತಿ ಒಂದು ದೊಡ್ಡ ಹಬ್ಬ ರಂಜಾನ್ ಆಗಿದೆ. ಇದು ಮುಸಲಾನರಿಗೆ ಒಂದು ವರ್ಷಕ್ಕೆ ಒಂದು ಸಲ ಮಾತ್ರ ಬರುತ್ತದೆ. ನಾನು ನಮ್ಮ ಅಧಿಕಾರಿಗಳಿಗೆ ಏನು ಹೇಳಿದ್ದೇನೆ ಎಂದರೆ, ಯಾವ ಯಾವ ಮುಸಲ್ಮಾನರು ಜೈಲಿನಲ್ಲಿ ಬಂಧಿಗಳಾಗಿದ್ದಾರೋ ಅವರಿಗೆ ಈ ರಂಜಾನ್ ಹಬ್ಬದ ಕೊನೆ ದಿವಸ ಈ ಹಬ್ಬವನ್ನು ಆಚರಣೆ ಮಾಡಲಿಕೆ

ಅನುಕೂಲ ಮಾಡಿ ಕೊಡಬೇಕು ಎಂದು. ಮುಸಲ್ಮಾನ ಬಾಂಧವರಿಗೆ ರಂಜಾನ್ ಕೊನೆಯ ದಿವಸ ಒಂದು ವಿಶೇಷ ಹಬ್ಬದ ದಿವಸ ವಾಗಿರುತ್ತದೆ. ಆದುದರಿಂದ ಬಂಧನದಲ್ಲಿರುವವರಿಗೂ ಕೂಡ ಅವರ ಹಬ್ಬವನ್ನು ಆಚರಣೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅಂತಹವರನ್ನು ತಾತ್ಕಾಲಿಕವಾದರೂ ಬಿಡುಗಡೆ ಮಾಡಬೇಕು. ಒಂದು ವೇಳೆ ಅವರ ಮೇಲೆ ಗುರುತರವಾದ ಆಪಾದನೆಗಳು ಇದ್ದರೆ, ಹಬ್ಬದ ನಂತರ ಅವರನ್ನು ಪುನಃ ಬಂಧನ ಮಾಡಿದರೂ ಅಡ್ಡಿ ಇಲ್ಲ ಒಟ್ಟಿನಲ್ಲಿ ಅವರಿಗೆ ಹಬ್ಬವನ್ನು ಆಚರಿಸಲು ಅನುಕೂಲ ಮಾಡಿಕೊಡಬೇಕೆಂದು ಹೇಳಿದ್ದೇನೆ. ಒಂದು ನಮ್ಮ ದುರ್ದೈವದ ವಿಷಯ ಏನೆಂದರೆ, ಹಿಂದು ಮತ್ತು ಮುಸಲ್ಮಾನ ಭಾಂದವರಲ್ಲಿ ಪುನಃ ಪುನಃ ಈ ರೀತಿಯಾಗಿ ಮತೀಯ ಗಲಭೆಗಳು ಆಗ ತಕ್ಕಂಥಾದ್ದಕ್ಕೆ ನಿಜವಾಗಿ ಯಾವ ಕಾರಣಗಳು ಇಲ್ಲ ಎಂದು ಹೇಳಬೇಕಾಗುತ್ತದೆ. ಆದರೆ ಚಿಕ್ಕ ಮಕ್ಕಳ ಜಗಳದಿಂದ ಇಂಥ ಗಲಭೆಗಳು ಉದ್ಭವವಾಗುತ್ತವೆ ಅದು ಒಬ್ಬ ಹಿಂದು ಹುಡುಗ ಮುಸಲ್ಮಾನ ಹುಡುಗಿಯನ್ನು ಕೆಣಕಿದ ಕಾರಣಕ್ಕಾಗಿ, ಅಥವಾ ಒಬ್ಬ ಮುಸಲ್ಮಾನ ಹುಡುಗ ಹಿಂದು ಹುಡುಗಿಯನ್ನು ಕೆಣಕಿದ ಎಂಬ ಕಾರಣಕ್ಕಾಗಿಯೋ ಇಂಥ ಗಲಭೆಗಳು ಆಗಬಹುದು. ಒಬ್ಬ ಮುಸಲ್ಮಾನ ಹುಡುಗ ಹಿಂದು ಹುಡುಗಿಯನ್ನು ಕೆಣಕಿದ ಕಾರಣಕ್ಕಾಗಿ ಅಂಥ ಪ್ರಸಂಗ ಬಂದರೆ ತತ್‌ಕ್ಷಣ ಮತೀಯ ಗಲಭೆ ಆಗುತ್ತದೆ. ಆದರೆ ಅದೇ ಒಬ್ಬ ಹಿಂದು ಹುಡುಗ ಒಬ್ಬ ಹಿಂದು ಹುಡುಗಿಯನ್ನು ಕೆಣಕಿದರೆ ಗಲಭೆಯೂ ಆಗುವುದಿಲ್ಲ. ಇದೊಂದು ದುರ್ದೈವದ ಸಂಗತಿ ಎಂದು ಹೇಳಬೇಕಾಗುತ್ತದೆ.

ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಇತರ ಎಲ್ಲಾ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ, ನಾವು ಇಲ್ಲಿ ಯಾವುದೇ ಚರ್ಚೆಯನ್ನು ಮಾಡಿದರೂ ಅದರಿಂದ ಹೊರಗಡೆ ಒಂದು ಕೆಟ್ಟ ಪರಿಣಾಮ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಈಗ ಯಾವುದೇ ಪಕ್ಷ ಭೇದ ಇಲ್ಲದ ದೃಷ್ಟಿಯಿಂದ ನಾವೆಲ್ಲರೂ ಈ ಒಂದು ಸಮಸ್ಯೆಯನ್ನು ನೋಡ ಬೇಕಾಗಿದೆ. ಇದಕ್ಕೆ ತಮ್ಮೆಲ್ಲರ ಸಹಕಾರ, ಸಹಾಯ ಅತ್ಯಗತ್ಯವಾಗಿದೆ. ಆ ದಿಸೆಯಲ್ಲಿ ತಮ್ಮೆಲ್ಲರ ಸಹಕಾರ ಇದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಮುಖ್ಯಮಂತ್ರಿಯವರು ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿತ್ತು. ಅವರು ಘಟನೆಯು ನಡೆದ ಸ್ಥಳಕ್ಕೆ ಹೋಗಿ ಭೇಟಿ ಕೊಡಬೇಕಾಗಿತ್ತು. ಶಿಡ್ಲಘಟ್ಟವು ಇಲ್ಲಿಂದ ಒಂದು ಘಂಟೆಯ ಪ್ರಯಾಣದ ದೂರ ಸ್ಥಳವಾಗಿದೆ. ಡಿ.ಜಿ.ಪಿ. ಯವರು ಮತ್ತು ಮುಖ್ಯಮಂತ್ರಿಯವರು ಹೋಗಿ ಕಂಟ್ರೋಲ್ ಮಾಡಬಹುದಾಗಿತ್ತು. ಕಳೆದ ಏಪ್ರಿಲ್ ತಿಂಗಳಿಂದ ಇದುವರೆಗೆ ಒಂದು ರೀತಿಯಲ್ಲಿ ಪಂಜಾಬ್‌ನಲ್ಲಿ ನಡೆಯುತ್ತಿರುವ ರೀತಿಯಲ್ಲಿ ಅಲ್ಲಿ ನಡೆಯುತ್ತಾ ಇದೆ. ಬಾಂಬ್‌ಗಳು ಕೂಡ ಬಂದಿವೆ ಎಂದು ತಿಳಿದು ಬರುತ್ತದೆ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ ಸುದ್ದಿಗಳ ಪ್ರಕಾರ ನೋಡಿದರೆ ಆ ಪ್ರದೇಶದಲ್ಲಿ ಉಂಟಾಗಿರುವ ನಷ್ಟವು ಇನ್ನೂ ಜಾಸ್ತಿಯಾಗಿದೆ ಎಂದು ತಿಳಿಯಬಹುದು. ಸುಮಾರು ೪೨ ಅಂಗಡಿಗಳು ಲೂಟಿಗೆ ಒಳಗಾಗಿವೆ. ಆಯುಧಗಳು ಕೂಡ ಬಳಕೆಯಾಗುತ್ತಿವೆ ಎಂದು ತಿಳಿದು ಬರುತ್ತಿದೆ. ಈ ಗಲಭೆಯು ಹತ್ತಿರದ ಹಳ್ಳಿಗಳಿಗೂ ಕೂಡ ವಿಸ್ತಾರವಾಗುತ್ತಿದೆ. ಪತ್ರಿಕೆಯಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಇದು ವಿಸ್ತಾರ ಆಗುತ್ತಾ ಇದೆ ಎಂದು ಕೂಡ ಬಂದಿದೆ, ಹಲಬೂರು ರಸ್ತೆಯಲ್ಲಿನ ತಾತಹಳ್ಳಿ, ಹನುಮಂತಪುರ ಮತ್ತು ಹೊಸ ಹುಡ್ಯ ಈ ಹಳ್ಳಿಗಳಿಗೆ ಪಸರಿಸಿದ ಬಗ್ಗೆ ಸುದ್ದಿ ಇದೆ. ಈ ಸಮಯದಲ್ಲಿನ ದುರಾದೃಷ್ಟಕರವಾದಂತಹ ಘಟನೆಯ ಜೊತೆಗೆ ಮುಸಲ್ಮಾನ ಬಂಧುಗಳಿಗೆ ರಂಜಾನ್ ಹಬ್ಬ ಬಂದಿದೆ. ಶಿಡ್ಲಘಟ್ಟಕ್ಕೆ ನಾನು ಹೋಗಿದ್ದೇನೆ. ಅಲ್ಲಿನ ಶಾಂತಿ ಸಮಿತಿಯಲ್ಲಿ ಇರುವವರು ಕೆಲವರು ಗಲಭೆಗೆ ಪ್ರಚೋದನೆಯನ್ನು ಮಾಡುವಂಥಹ ವ್ಯಕ್ತಿಗಳು ಇದ್ದಾರೆ. ಅವರು ದೊಡ್ಡ ಮನುಷ್ಯರ ರೀತಿಯಲ್ಲಿ ಗಲಭೆಯನ್ನು ಎಬ್ಬಿಸಿ ಸುಮ್ಮನೆ ಕುಳಿತುಬಿಡುತ್ತಾರೆ. ಅಂತಹವರ ಹೆಸರನ್ನು ನಾನು ಇಲ್ಲಿ ಹೇಳಬಯಸುವುದಿಲ್ಲ. ಮೊದಲು ಅಂತಹವರು ಪ್ರಚೋದನೆಯನ್ನು ಸೃಷ್ಟಿಮಾಡಿಬಿಟ್ಟು ಆಮೇಲೆ ಪೋಲೀಸರ ಹತ್ತಿರ ಹೋಗಿ ಅವರಿಂದ ಒಳ್ಳೆಯ ಹೆಸರನ್ನು ಪಡೆಯಲು ಪ್ರಯತ್ನ ಮಾಡುತ್ತಾರೆ. ನಾನು ಪೋಲೀಸ್ ಸ್ಟೇಷನ್‌ಗೆ ಹೋದಾಗ ಅವರು ಯಾವ ಕಾರಣಕ್ಕಾಗಿಯೋ ಏನೋ ಅಂತಹ ಕೆಲವರನ್ನು ಹಿಡಿಯಲಿಕ್ಕೆ ಹೋಗಲಿಲ್ಲ. ಅಂತಹ ದೊಡ್ಡ ಮನುಷ್ಯರನ್ನು ಹಿಡಿಯುವುದಕ್ಕೆ ಅವರು ಹೋಗಿಲ್ಲ ಎಂದು ಕಾಣುತ್ತದೆ ನಾನು ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ತಾವು ಮಾನ್ಯ ಮಂತ್ರಿಯವರಾದ ಮೊಹಿನ್ನುದ್ದೀನ್, ವೀರಣ್ಣ, ಮತ್ತು ಪಕ್ಷದ ಕ್ಷೇತ್ರದ ಶಾಸಕರಾದ ಕೃಷ್ಣರೆಡ್ಡಿಯವರನ್ನು ಕಳುಹಿಸಿದ್ದೀರಿ ಎಂದು ಹೇಳಿದ್ದೀರಿ. ಅಷ್ಟೇ ಅಲ್ಲದೆ ತಾವುಗಳ್ಳ

**ಸ್ವತಃ ಡಿ.ಜಿ.ಪಿ.ಯವರನ್ನು ಕರೆದುಕೊಂಡು ಸ್ಥಳಕ್ಕೆ ಹೋಗಿ ಆ ಪ್ರದೇಶದಲ್ಲಿ ಶಾಂತಿ ಸೌಹಾರ್ದತೆಯನ್ನು ನೆಲೆಸುವಂತೆ ಮಾಡಲು ಪ್ರಯತ್ನಗಳನ್ನು ಮಾಡುತ್ತೀರಾ ?** ಇದನ್ನು ಹಾಗೆಯೇ ಬಿಟ್ಟರೆ ಕೋಲಾರ ಜಿಲ್ಲೆಯ ಇತರ ಸ್ಥಳಗಳಿಗೂ ಈ ಗಲಭೆ ವಿಸ್ತಾರಗೊಳ್ಳಬಹುದಾದ ಸಂದರ್ಭ ಉಂಟು. ತಾವುಗಳು ರಾಜ್ಯದ ಗೃಹ ಮಂತ್ರಿಗಳೂ ಕೂಡ ಆಗಿದ್ದೀರಿ. ಆದುದರಿಂದ ತಕ್ಷಣ ಅಲ್ಲಿಗೆ ಹೋಗಿ ಉಭಯಪಕ್ಷದವರನ್ನು ಕರೆಸಿ, ಅವರಲ್ಲಿ ಸೌಹಾರ್ದತೆಯನ್ನು ಬೆಳೆಸಬೇಕು ತಾವೇ ಹೇಳಿದ ಹಾಗೆ ಕ್ಷುಲ್ಲಕ ಕಾರಣಕ್ಕಾಗಿ ಇಂತಹ ಗಲಭೆಗಳು ಎಲ್ಲಿಯೂ ಆಗಬಾರದು ಬೇಡ.

೧–೦೦ ಪಿ.ಎಂ.

೨ ಗಂಟೆಗೆ ಇದು ಗೊತ್ತಾಯಿತು. ಮುಸ್ಲಿಂ ಹುಡುಗನೊಬ್ಬ ಚೀಫನ್ನು ಎತ್ತಿಕೊಂಡು ರಸ್ತೆಯಲ್ಲಿ ಹೋಗುತ್ತಿದ್ದಾಗ ಗಲಾಟೆ ಶುರುವಾಯಿತೆಂದು ಹೇಳಿದ್ದಾರೆ. ಪಿಡ್ಡಘಟ್ಟ ದೂರ ಏನೂ ಇಲ್ಲ, ನೀವು ತಕ್ಷಣ ಹೋಗಿ. ನಾಳೆ ಸಬ್ಬ ಬೇರೆ ಇದೆ. ದುಷ್ಕರ್ಮಿಯಾವನಾದರೂ ಇರಲಿ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ. ಎರಡೂ ಕೋಮುಗಳಲ್ಲಿನ ಪ್ರಭಾವಶಾಲಿ ವ್ಯಕ್ತಿಗಳು ಇದರ ಹಿಂದಿದ್ದಾರೆ ಎಂದು ಗೊತ್ತಾಗಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ —ಮಾನ್ಯ ಮುಖ್ಯ ಮಂತ್ರಿಗಳು ಬಹಳ ನೊಂದು ವಿಚಾರಗಳನ್ನು ಹೇಳಿದರು. ಇದು ನಿನ್ನೆ ಮೊನ್ನೆ ಶುರುವಾದದ್ದಲ್ಲ, ಎರಡು ವರ್ಷಗಳೇ ಆಯ್ತು. ಲಾಠಿಚಾರ್ಜ್ ಆಗಿದೆ, ಪೋಲೀಸ್ ಫೈರಿಂಗ್ ಆಗಿದೆ. ಸಣ್ಣ ಕಾರಣಕ್ಕಾಗಿ ಶುರುವಾದ ಗಲಾಟೆ ಅನೇಕ ಆಸ್ಪತ್ರೆಗಳ ಸಾಲಿನಲ್ಲಿ ಮುಂದುವರಿದಿದೆ. ಹತ್ತಾರು ಅಂಗಡಿಗಳನ್ನು ದೋಚಲಾಗಿದೆ. ಅನೇಕ ಆಸ್ತಿಗಳಿಗೆ ಬೆಂಕಿ ಹಚ್ಚಿದ್ದಾರೆ ಇದು ಎರಡು ಕಡೆಯೂ ಆಗಿದೆ. ಪಂಕ್ಚಳು ಮರಿ ಹೆಣ್ಣುಮಕ್ಕಳೂ ಭಯಗ್ರಸ್ತರಾಗಿ ಬೀದಿಗೆ ಬಾರದಂತಾಗಿದೆ ಇದು ಬಹಳ ದುರದೃಷ್ಟಕರ, ಜನ ವಿವೇಕ ಕಳೆದುಕೊಂಡಿದ್ದಾರೆನಿಸುತ್ತಿದೆ. ಇದನ್ನೆಲ್ಲಾ ಕೂಡಲೇ ತಪ್ಪಿಸಲು ತುರ್ತಾಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಾಳೆ ಹಬ್ಬ ಬೇರೆ ಇದೆ. ಎಲ್ಲಾ ಸ್ಮಶಾನದಂತೆ ಕಾಣುತ್ತಿದೆ. ಬರೀ ಪೋಲೀಸರು, ಅವರ ವ್ಯಾನ್‌ಗಳು ಬಿಟ್ಟರೆ ಬೀದಿಗಳಲ್ಲೆಲ್ಲಾ. ನಾಳೆ ಹಬ್ಬವನ್ನು ಹೇಗೆ ಆಚರಿಸುತ್ತಾರೋ ಗೊತ್ತಿಲ್ಲ ನಾನೂ ನೆಂಡಲು ಹೋಗುತ್ತಿದ್ದೇನೆ. ಮುಖ್ಯ ಮಂತ್ರಿಗಳೂ ಹೋಗಿ ಬರಲಿ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಎಚ್ಚರಿಕೆ ತೆಗೆದುಕೊಳ್ಳಬೇಕು.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸನ್ಮಾನ್ಯ ಅಧ್ಯಕ್ಷರೇ, ಪಿಡ್ಡಘಟ್ಟ ಇನ್ಸಿಡೆಂಟನ್ನು ಆದಿತ್ಯವಾದ ಶುರುವಾದದ್ದೆಂದು ಹೇಳಲಿಕ್ಕಾಗುವುದಿಲ್ಲ. ನಿಜಕ್ಕೂ ತಾರೀಖು ಮಧ್ಯಾಹ್ನ ಎರಡೂವರೆ ಗಂಟೆಗೆ ಶುರುವಾಯಿತು ಆದರೆ ಇದರ ಹಿಂದೆ ಎರಡೂವರೆ ವರ್ಷ ಗಳಿಂದ ಗಲಭೆಯಾಗಿದೆ. ಮಾರಮ್ಮನ ಜಾತ್ರೆ ಇರಬಹುದು, ಕರಗ ನಡೆಯುವಾಗ ಇರಬಹುದು, ಹೀಗೆ ಎರಡೂ ಗುಂಪುಗಳ ಕಡೆ ಕಾರಣಗಳು ಇರಬಹುದು. ಇದರ ಜತೆಗೆ ಆ ಸ್ಥಳ ಬಿಸಿನೆಸ್ ಸೆಂಟರ್ ಹೌದು. ಇಂತಹ ಕಡೆ ಇನ್ಸಿಡೆಂಟ್‌ನಾಗಿದೆ ಎಂದರೆ ಹೊರಗಡೆ ಪ್ಯಾಸೆಂಜರ್ಸ್ ಹೋಗುವ ಹಾಗಿಲ್ಲ. ರಸ್ತೆಗಳೆಲ್ಲೆಲ್ಲಾ ಬ್ಲಾಕೇಡ್‌ಗಳನ್ನು ಮಾಡಿದ್ದಾರೆ, ಅನೇಕ ಜನ ಬಸ್‌ಗಳಿಂದ ಇಳಿದು ನಾಲ್ಕೈದು ಮೈಲಿ ನಡೆದುಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡು ಮೂರು ವರ್ಷದಿಂದ ಹೊಗೆಯಾಡುತ್ತಿದ್ದರೂ ಪೋಲೀಸರು ಇದರ ಬಗ್ಗೆ ಪ್ರಿಕಾಷನರಿ ಕ್ರಮವನ್ನು ತೆಗೆದುಕೊಂಡಿಲ್ಲ. ಮಾರಮ್ಮನ ಜಾತ್ರೆ ನಡೆಯುವಾಗ ಗಲಾಟೆಯಾಯಿತೆಂದೂ ಮತ್ತೆ ಕೆಲವರು ಕರಗ ನಡೆಯುವಾಗ ಆಯಿತೆಂದೂ ಹೇಳುತ್ತಾರೆ. ಈಚೆಗೆ ಒಬ್ಬ ಮಾಂಸವನ್ನು ಮಾಸವಿ ದೇವಸ್ಥಾನದ ಬೀದಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಅವನನ್ನು ಬೇರೆ ಕೋಮಿನವರು ಹಿಡಿದುಕೊಂಡು ಹೊಡೆದರು ಎಂದು ಹೇಳುತ್ತಾರೆ. ಪೋಲೀಸರು ಎಚ್ಚರವಾಗದಿದ್ದರೆ ಇನ್ನು ಮುಂದೆಯೂ ಇದು ನಡೆಯುತ್ತಲೇ ಇರುತ್ತದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಲಿ ಎಸ್‌ಪಿ ಆಗಲಿ ಅಥವಾ ಸಬ್ ಇನ್ಸ್‌ಪೆಕ್ಟರ್ ಆಗಲಿ ಮುತುವರ್ಜಿ ವಹಿಸಿದ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಇವತ್ತು ಕಲ್ಲು ತೂರಾಟದಲ್ಲಿ ಸುಮಾರು ೪೮ ಜನ ಗಾಯಗೊಂಡಿದ್ದಾರೆ. ಪೋಲೀಸ್ ಫೈರಿಂಗ್‌ನಲ್ಲಿ ಆರು ಜನರಿಗೆ ಏಟುಗಳು ಬಿದ್ದು ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಆಲ್ಲಿದ್ದಂತಹವರು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಡವರು ಯಾರಿದ್ದಾರೆ, ಕೂಲಿಕಾರರು ಯಾರಿದ್ದಾರೆ ಅವರಿಗೆ ಏನು ಸಹಾಯ ಮಾಡಿದ್ದೀರಿ? ತಮಗೇ ಗೊತ್ತಿದೆ ಗಲಾಟೆ ಮಾಡುವಾಗ ದೊಡ್ಡ ದೊಡ್ಡ ಶ್ರೀಮಂತರು, ಪ್ರಭಾವಿಗಳು ಯಾರೂ ಇರುವುದಿಲ್ಲ. ಇದರಲ್ಲಿ ಸಾಯುವವರು ಬಡವರು, ಕೂಲಿ ಕೆಲಸ ಮಾಡಿ ತಮ್ಮ ಹೊಟ್ಟೆ ಹೊರೆಯುತ್ತಾರೆ, ಅಂತಹ ಜನರಿಗೆ ತೊಂದರೆಯಾಗಿದೆ. ಇಂತಹ ಜನಗಳಿಗೆ ಯಾವ ರೀತಿ ಪರಿಹಾರವನ್ನು ಕೊಟ್ಟಿದ್ದೀರಿ? ಜಗಳ ನಡೆದದ್ದು ಊರಿನಲ್ಲಿ ತೋಟಕ್ಕೆ ಬೆಂಕಿ ಹಚ್ಚಬೇಕು, ಹಾಳು ಮಾಡಬೇಕೆಂದರೆ ಇದರ ಅರ್ಥ ಏನು? ಪರ್‌ಪಸ್‌ಫುಲ್ ಆಗಿ ಮಾಡಬೇಕೆಂದು ಇರಬೇಕು. ಹಿಂದೂ ಇರಬಹುದು ಇಲ್ಲವೇ ಅವನು ಮುಸ್ಲಿಂ ಇರಬಹುದು ಅದು ಬೇರೆ ವಿಚಾರ. ಈ ರೀತಿ ನಡೆಯಬೇಕಾದರೆ ಎಷ್ಟು ಸಮಯ ಗ್ಯಾಪ್ ಇದೆ ಎಂದು ಗಮನಿಸಿದರೆ ಪೋಲೀಸರು ಇದರಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಲಿಕ್ಕೆ ವಿಫಲರಾಗಿದ್ದಾರೆಂದು ನೊಂದು ಹೇಳಬೇಕಾಗಿದೆ. ಪೋಲೀಸರು ಕೆಲಸ ಮಾಡುತ್ತಿಲ್ಲವೆಂದು ಅವರನ್ನು ಡಿಸ್‌ಕರೇಜ್ ಮಾಡಬೇಕೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಇಷ್ಟೆಲ್ಲಾ ಘಟನೆಗಳಾಗಿದ್ದು ಈ ಘಟನೆ ನಡೆಯುತ್ತಿದೆಯೆಂದು ಗೊತ್ತಿದ್ದರೂ ಕೂಡ ಅವರ ಹೊಲಗಳಿಗೆ ಹೋಗಿ ಬೆಂಕಿ ಹಚ್ಚುವಷ್ಟು ಅದನ್ನು ಕಡಿಯುವಷ್ಟು ಗ್ರೇಪ್ ಕ್ರಾಪ್ ಅನ್ನು ಹಾಳು ಮಾಡುವಷ್ಟು ಸಮಯದಲ್ಲಿ ಪೋಲೀಸರು ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಅವರು ಸರಿಯಾದ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ವಿಫಲರಾಗಿದ್ದಾರೆಂದು ಹೇಳಬೇಕಾಗುತ್ತದೆ. ಅಲ್ಲಿ ೧೦ ದಿನಗಳ ಕಾಲ ಕರ್ಫ್ಯೂವನ್ನು ಅನೌನ್ಸ್ ಮಾಡಿದ್ದೀರಿ ಅಂದರೆ ೫ ಕಿಲೋ ಮೀಟರ್ ಒಳಗಡೆಯಿರುವಂತಹ ಹಳ್ಳಿಗಳು ಏನು ಇದೆ ಅಲ್ಲಿ ಹತ್ತು ದಿನಗಳವರೆಗೆ ಕರ್ಫ್ಯೂವನ್ನು ಜಾರಿ ಮಾಡಿದ್ದೀರಿ. ಇದರಿಂದಾಗಿ ಆ ಯಾವ ಹಳ್ಳಿಗಳಲ್ಲೂ ಕೂಡ ಕೆಲಸ ಕಾರ್ಯಗಳು ನಡೆಯುವ ಹಾಗಿಲ್ಲ, ವ್ಯಾಪಾರಕ್ಕೆ ಅವರು ಬರುವ ಹಾಗಿಲ್ಲ ನಾಳೆ ಬೇರೆ ರಂಜಾನ್ ಹಬ್ಬ ಇದೆ ಅನೇಕ ಜನರು ಸಾಮಾನುಗಳನ್ನು ಖರೀದಿ ಮಾಡಬೇಕೆಂದು ಇರುತ್ತಾರೆ. ಆದರೆ ಅಲ್ಲಿ ಅಂಗಡಿಗಳು ತೆರೆದಿಲ್ಲ. ಇದರಿಂದಾಗಿ ಯಾವ ಸಾಮಾನುಗಳು ಕೂಡ ಸಿಗುವ ಹಾಗಿಲ್ಲ. ರಂಜಾನ್ ಮಾಡತಕ್ಕಂತಹ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಖುದ್ದಾಗಿ ಭೇಟಿ ನೀಡಬೇಕು. ಕೇವಲ ೫೦ ಕಿಲೋಮೀಟರ್ ದೂರದಲ್ಲಿ ಇದು ಇದೆ ಇದೇನೂ ಬಹಳ ದೂರವಲ್ಲ. ಗುಲ್ಬರ್ಗದ ಇಂಟೀರಿಯರ್‌ನಲ್ಲಿ ಇದು ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಬರುವುದಕ್ಕೆ ತೊಂದರೆಯಾಗುತ್ತದೆ ಅಲ್ಲಿ ರೋಡ್ ಸರಿಯಿಲ್ಲ ಅವರಿಗೆ ಸೊಂಟ ನೋವು ಬರುತ್ತದೆಂದು ಹೇಳಬಹುದು. ಆದರೆ ಇದು ಬಹಳ ಹತ್ತಿರದಲ್ಲಿದೆ. ತಾವು ಅಲ್ಲಿಗೆ ಹೋದರೆ ಪೋಲೀಸರು ಅಲರ್ಟ್ ಆಗುತ್ತಾರೆ ಮತ್ತು ಎರಡೂ ಕೋಮಿನವರಿಗೂ ಬುದ್ಧಿವಾದವನ್ನು ಇವರು ಹೇಳಿದರೆ ಅದು ಬಗೆಹರಿಯಬಹುದೆಂಬ ವಿಶ್ವಾಸ ನಮಗಿದೆ. ಅಲ್ಲಿನ ಲೀಡರ್‌ಗಳಲ್ಲಿ ಒಬ್ಬರು ಹೇಳಿದರೆ ಇನ್ನೊಬ್ಬರು ಕೇಳುವುದಿಲ್ಲ, ಅಲ್ಲಿ ಏನು ಬರುತ್ತದೆಂದರೆ, ನಮ್ಮ ಪಕ್ಷದವರ್ಯಾರಾದರೂ ಹೇಳುವುದಕ್ಕೆ ಹೋದರೆ ಅವರು ಕಾಂಗ್ರೆಸ್ಸಿನವರು ಎಂದು ಹೇಳುತ್ತಾರೆ. ಜನತಾ ಪಕ್ಷದವರು ಹೇಳುವುದಕ್ಕೆ ಹೋದರೆ ಅವರ ಪರವಾಗಿ ಇವರು ಹೇಳುತ್ತಿದ್ದಾರೆಂದು ಇನ್ನೊಂದು ಕೋಮಿನವರು ಹೇಳುತ್ತಾರೆ ಮುಸಲ್ಮಾನರ ಪರವಾಗಿ ಹೇಳಿದರೆ ಅವರಿಗೆ ಕೋಪ ಬರುತ್ತದೆ. ಹಿಂದೂಗಳ ಪರವಾಗಿ ಹೇಳಿದರೆ, ಮುಸಲ್ಮಾನರ ನಿಷ್ಠೂರವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಇಂತಹ ನಿಷ್ಠೂರವನ್ನು ಕಟ್ಟಿಕೊಳ್ಳಲಿಕ್ಕೆ ಅವರು ತಯಾರಿಲ್ಲ. ಇಂತಹ ಪರಿಸ್ಥಿಯು ಅಲ್ಲಿ ಇರುವುದರಿಂದ ತಾವು ಖುದ್ದಾಗಿ ಹೋಗಿ ಕಣ್ಣಾರೆ ನೋಡಿ ಪರಿಹಾರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಅಲ್ಲಿ ಬಸ್‌ಗಳು ಸರಿಯಾಗಿ ಓಡಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ೧೦ ದಿನಗಳ ಕಾಲ ಕರ್ಫ್ಯೂವನ್ನು ಜಾರಿ ಮಾಡಿದ್ದರಿಂದಾಗಿ ಅಲ್ಲಿನ ಜನರು ಕೂಲಿ ಕೆಲಸ ಮಾಡುವುದು ನಿಂತು ಹೋಗಿರುತ್ತದೆ. ಅವರು ವ್ಯಾಪಾರ ಮಾಡುವುದು ನಿಂತು ಹೋಗಿರುತ್ತದೆ. ಇದನ್ನು ರಿಲಾಕ್ಸ್ ಮಾಡಬೇಕು. ಮತ್ತು ೫೬ ದೊಡ್ಡ ದೊಡ್ಡ ಮನೆಗಳು ೨೦ ಗುಡಿಸಲುಗಳು ಏನು ಇದರಲ್ಲಿ ಸುಟ್ಟಿವೆ ಇದಕ್ಕೂ ಕೂಡ ಪರಿಹಾರ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕು. ಇವುಗಳಿಗೆ ಕಾಂಪನ್‌ಸೇಷನ್ ಕೊಡಬೇಕು ಅವರು ಹಿಂದೂ ಇರಬಹುದು ಇಲ್ಲವೇ ಮುಸ್ಲಿಂ ಇರಬಹುದು ಅವರಿಗೆ ಮನೆಗಳನ್ನು ಕಟ್ಟಿಸಿಕೊಂಡುವಂತಹ ವ್ಯವಸ್ಥೆ ಕೂಡ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಮತ್ತು ಯಾವ ರೀತಿಯಾಗಿ ಅಲ್ಲಿ ಷಾಪ್‌ಗಳನ್ನು ಸುಟ್ಟಿಹಾಕಿದ್ದಾರೆ, ಅವರುಗಳಿಗೆ ಬ್ಯಾಂಕುಗಳಿಂದ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದೇ ರೀತಿಯಾಗಿ ಗುಲ್ಬರ್ಗಾನಲ್ಲಿ ೧೯೭೯ರಲ್ಲಿ ಒಂದು ಇನ್ಸಿಡೆಂಟ್ ಆಗಿತ್ತು ಪೀಪಲ್ಸ್ ಆಮೇಲೆ ೧೯೮೪ರಲ್ಲಿ ಮತ್ತೊಂದು ಇನ್ಸಿಡೆಂಟ್ ಆಗಿತ್ತು. ನಮ್ಮ ಸರ್ಕಾರದಿಂದ ಇಂಟರೆಸ್ಟ್ ಫ್ರೀ ಲೋನ್ ಎಂದು ಕೊಟ್ಟಿದ್ದರು. ಅವರುಗಳ ದುಖಾನ್‌ಗಳನ್ನು ಸುಟ್ಟು ಹಾಕಿದ್ದರು. ಅಂಥವರಿಗೆ ಸಹಾಯ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ದಯವಿಟ್ಟು ಆ

ವ್ಯವಸ್ಥೆಯನ್ನು ಇವರಿಗೂ ಸಹಾ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೊಂದು ಏನೆಂದರೆ ಅಲ್ಲಿ ಎರಡು ಗ್ರೂಪುಗಳಲ್ಲಿ ಗೆಲ್ಲಿವಾ ಟ್ಯಾಕ್ಟಿಕ್ಸ್ ಯೂಸ್ ಮಾಡುತ್ತಿದ್ದಾರೆ. ಹಿಂದೆಯಿಂದ ಬಂದು ಹೊಡೆಯುವುದು, ಓಡಿಹೋಗುವುದು, ಇನ್ನೊಸೆಂಟ್ ಜನರನ್ನು ಚೂರಿಯಿಂದ, ಚಾಕುವಿನಿಂದ ಕಲ್ಲಿನಿಂದ ಒಡೆದುಬಿಟ್ಟು ಹೋಗುವುದು ಈ ರೀತಿಯಾಗಿ ಟ್ಯಾಕ್ಟಿಕ್ಸ್‌ನ್ನು ಯೂಸ್ ಮಾಡುತ್ತಿದ್ದಾರೆ ಎನ್ನತಕ್ಕಂಥ ಪರಿಸ್ಥಿತಿ ಕೂಡಾ ಅಲ್ಲಿಂದ ಬಂದಿದೆ ಮತ್ತು ಇದರ ಬಗ್ಗೆ ತಪ್ಪಾಗಲೂ ಕೂಡ ಗೊತ್ತಿದೆ. ಇದರ ಬಗ್ಗೆ ಈಗಾಗಲೇ ರಿಪೋರ್ಟ್ ಮಾಟ್ಟಿರಬಹುದು. ಇದರಿಂದ ಏನಾಗುತ್ತದೆ, ಇಲ್ಲಿ ಏನು ಒಂದು ಇನ್‌ಸಿಡೆಂಟ್ ಆಗಿದೆ, ಅದಕ್ಕೆ ಪ್ರೋತ್ಸಾಹ ಏನಾದರೂ ಸಿಗುತ್ತಿದೆಯೇ? ಏಕೆಂದರೆ ಊಹಾ ಪೋಹಗಳು ಜನರಿಂದ ಜನರಿಗೆ ಹರಡಿ ಅವರು ಇವರು ಇಬ್ಬರೂ ಸೇರಿ ಗಲಾಟೆ ಮಾಡುವ ಹಾಗೆ ಗತ್ತದೆ. ಯಾರ್ಯಾರು ಇಂಥ ಟ್ಯಾಕ್ಟಿಕ್ಸ್‌ಗಳಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಅಲ್ಲಿ ಯಾರು ಬ್ಲಾಕೆಡ್ ಮಾಡುತ್ತಿದ್ದಾರೆ, ಬಸ್‌ಗಳನ್ನು ಓಡಿಸದ ಹಾಗೆ ನಿಲ್ಲಿಸುವುದಕ್ಕೆ ಯಾರು ಪ್ರಯತ್ನ ಮಾಡುತ್ತಿದ್ದಾರೆ, ಜನರನ್ನು ಹೆದರಿಯಿತಕ್ಕಂಥದ್ದು ಅಂಥ ಜನರನ್ನು ಮತ್ತು ರಾತ್ರಿ ವೇಳೆ ಗಲಾಟೆ ಮಾಡತಕ್ಕಂಥ ಪ್ರಯತ್ನವನ್ನು ಯಾರು ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ನಿಷ್ಪಕ್ಷಪಾತವಾಗಿ ಅವರು ಯಾವ ಪಕ್ಷಕ್ಕೆ ಸೇರಿದವರಿಗಲಿ, ನಿಮ್ಮ ಪಾರ್ಟಿಯವರೇ ಇರಲಿ, ನಮ್ಮ ಪಾರ್ಟಿಯವರೇ ಇರಲಿ, ಅವರು ಹಿಂದೂನೇ ಆಗಿರಲಿ, ಮುಸ್ಲಿಂ ಆಗಿರಲಿ. ಅಲ್ಲಿ ಸರಿಯಾಗಿ ಲಾ ಅಂಡ್ ಆರ್ಡರನ್ನು ಕಂಟ್ರೋಲ್ ಮಾಡತಕ್ಕಂಥದ್ದು ಸರಿಯಾದ ರೀತಿಯಲ್ಲಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿನ ಅಧ್ಯಾಪಕರು, ಅವರು ಯಾವ ಗೋಜಿಗೂ ಹೋಗುವುದಿಲ್ಲ. ಅವರ ಮನೆಗೆ ನುಗ್ಗಿ ಅವರ ಮನೆಯಲ್ಲಿದ್ದು ಸಾಮಾನುಗಳನ್ನೆಲ್ಲಾ ಲೂಟಿ ಮಾಡಿದ್ದಾರೆ ಎಂದು ವರ್ತಮಾನ ಬಂದಿದೆ, ತಾವು ಪೇಪರ್‌ನಲ್ಲೂ ಕೂಡಾ ನೋಡಬಹುದು: ಇಂಥ ಅನೇಕ ವಿಷಯಗಳನ್ನು ಅದಕ್ಕಾಗಿ ಎಲ್ಲಾ ವಿಷಯಗಳಲ್ಲಿ ಸಂಪೂರ್ಣವಾಗಿ ಜನರಿಗೆ ಒಂದು ಕಾನ್‌ಫಿಡೆನ್ಸ್ ಬರಬೇಕಾದರೆ ಆತ್ಮವಿಶ್ವಾಸ ಹುಟ್ಟಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಪರ್ಸನಲೀ ವಿಸಿಟ್ ಕೊಟ್ಟು ಪರಿಹಾರ ಮಾಡಬೇಕು ಎಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ. ನಾನು ಏನು ನಿರೀಕ್ಷಣೆ ಮಾಡುತ್ತೇನೆಂದರೆ ಕೆಲವು ವಿಷಯಗಳನ್ನು ಏನೂ ಪ್ರಸ್ತಾಪ ಮಾಡಿದ್ದೇನೆ ಅವುಗಳು ಅವರು ಉತ್ತರ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಯವರೆ ಏನು ಭಯಾನಕವಾದಂಥ ಪರಿಸ್ಥಿತಿ ಕೆಲವು ಸಮಯದಿಂದ ಶಿವ್ಲಘಟ್ಟದಲ್ಲಿ ನಡೆಯುತ್ತಿದೆ, ಅದರ ಬಗ್ಗೆ ವಿವರವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ಪ್ರಶ್ನೆ ಏನು ಎಂದು ಹೇಳಿದರೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನವರು ಪ್ರಧಾನ ಮಂತ್ರಿಯವರೂ ಕೂಡಾ ಇದರ ಬಗ್ಗೆ ಒಂದು ಸುತ್ತೋಲೆಯನ್ನು ಪ್ರತಿ ರಾಜ್ಯಕ್ಕೆ ಕಳುಹಿಸಿದ್ದಾರೆ. ಇಂಥ ಕೋಮು ಗಲಭೆ ನಡೆದಾಗ ಆಯಾಯ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಪರನ್ನೇ ಜವಾಬ್ದಾರಿ ಮಾಡಬೇಕು ಎಂದು ಹೇಳಿ ಬೇರೆ ಬೇರೆ ರೀತಿಯಂ ಒಂದು ಮಾರ್ಗದರ್ಶನವನ್ನು ಕೂಡಾ ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯವರಲ್ಲಿ ಏನು ಕೇಳಬೇಕು ಎಂದರೆ ಒಂದೆರಡು ಆಥವಾ ಮೂರು ವರ್ಷದಿಂದ ಬಹಳ ಗಂಭೀರವಾಗಿ ಇಂಥ ಘಟನೆಗಳು ಶಿವ್ಲಘಟ್ಟದಲ್ಲಿ ನಡೆದಿದೆ. ಇದಂ ಏತಕ್ಕೆ ನಡೆಯಿತು? ಈ ಘಟನೆಯಲ್ಲಿ ಆಥವಾ ಈ ಗಲಭೆಯಲ್ಲಿ ಏನಂ ಕ್ಲಾಸಸ್ ಕಲಹ ಆಗುತ್ತಿದೆ ಇದು ಒಂದು ಹಂತ ಆದರೆ ಇದು ನಡೆಯಲಿಕ್ಕೆ ಏನು ಕಾರಣವಾಯಿತು. ಮತ್ತು ಇದರ ಬಗ್ಗೆ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೇಲೆ ಏನು ಜವಾಬ್ದಾರಿಯನ್ನು ನೀವು ಹೊರಿಸಿದ್ದೀರಿ? ಅವರ ಬಗ್ಗೆ ಏನು ಶಿಸ್ತು ಕ್ರಮ ತೆಗೆದುಕೊಂಡಿದ್ದೀರಿ? ಅದನ್ನು ದಯವಾಡಿ ತಾವು ಹೇಳಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳಾಗಲೀ, ಆಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಲಿ ಈ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಅವರ ಈ ಒಂದು ನಿರ್ಣಯವನ್ನು ಈ ಒಂದು ಕೋಮಿನ ಬಗ್ಗೆ ಆಥವಾ ಒಂದು ಗಲಭೆಯ ಬಗ್ಗೆ ಅಲ್ಲಿ ನೀವು ಆನುಷ್ಠಾನವನ್ನು ಮಾಡಿದ್ದರೆ ಇಂಥ ಘಟನೆಗಳು ಮತ್ತೂ ನಡೆಯುತ್ತದೆ. ಯಾರ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ ಎನ್ನುವುದನ್ನು ತಾವು ದಯವಾಡಿ ಹೇಳಬೇಕಾಗುತ್ತದೆ. ನೀವು ಯಾರ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ, ಅದನ್ನು ದಯವಿಟ್ಟು ಹೇಳಬೇಕು. ಏಕೆಂದರೆ, ಅದು ದಾವ ಸಂದರ್ಭದಲ್ಲಿ ನಡೆದಿದೆ ಎಂಬುದನ್ನು ನೋಡಬೇಕು. ನಿಮ್ಮ ಗುಪ್ತ ಮಾಹಿತಿ ಸಾಕಾಗಿಲ್ಲವೆದಿಲ್ಲ. ನಿಮ್ಮ ಇಂಟೆಲಿಜೆನ್ಸ್ ಏನು ಮಾಡುತ್ತಿತ್ತು? ಒಂದು ವೇಳೆ ವರದಿಯನ್ನು ಕೊಡುವುದಕ್ಕೆ ವಿಫಲ ಆದರೆ ಆಥವಾ ಈ ಸಂದರ್ಭದಲ್ಲಿ ಹೆಚ್ಚು ಪೋಲೀಸ್ ಫೋರ್ಸ್ ಆಥವಾ ಅಲ್ಲಿ ಊರಿನ ಜನರ ಒಂದು ಸ್ವಯಂ ಸೇವಕ ದಳದಿಂದ ತಡೆಯತಕ್ಕದ್ದನ್ನು ಪ್ರಯತ್ನ ಮಾಡಬಹುದಿತ್ತು, ಶಾಂತಿ ಸಮಿತಿ ನಿರ್ಣಯ ಆದಮೇಲೆ ಆ ನಿರ್ಣಯವನ್ನು ಅನುಷ್ಠಾನಕ್ಕೆ ತರುವ

ದಕ್ಕೆ ಪ್ರಯತ್ನ ಮಾಡಬೇಕು. ಯಾಕೆಂದರೆ ಒಂದು, ಒಂದೂವರೆ ತಿಂಗಳ ಹಿಂದೆ ಒಂದು ಗಲಭೆ ಆಯಿತು. ಒಂದು ಗುಂಪಿನ ಗೋರಿ ಮನೆಗಳು ಧ್ವಂಸ ಆಯಿತು. ಸರ್ಕಾರ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೂಲಕ ಹೇಳಿಕೆ ನೀಡಿದ ಮೇಲೆ ಮತ್ತೆ ಪುನಃ ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದೀರಿ, ನೀವು ಈ ಘಟನೆ ನಡೆಯದಂತೆ ಆಶ್ವಾಸನೆ ಕೊಟ್ಟ ಮೇಲೆ ಇವೊತ್ತಿಗೂ ಕೂಡ ಆದರೆ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಗಾಯ ಆದಮೇಲೆ ಅದು ತಣ್ಣಗೆ ಆಗಬೇಕು. ಗಾಯ ಆದ ಮೇಲೆ ಅದನ್ನು ತಣ್ಣಗೆ ಮಾಡುವುದಕ್ಕೆ ಇವೊತ್ತಿಗೂ ಕೂಡ ಅಧಿಕಾರಿಗಳಾ ಪ್ರಯತ್ನ ಮಾಡಿಲ್ಲ ಅಂದರೆ ಹೇಗೆ, ಗಾಯಗೊಂಡವರಿಗೆ ಪರಿಹಾರ ಕೊಡಬೇಕು. ಯಾರಿಂದ ಈ ಘಟನೆ ನಡೆದಿದೆ, ಇದಕ್ಕೆ ಪ್ರಚೋದನೆಯನ್ನು ಯಾರು ಮಾಡಿದರು ಎಂಬುದನ್ನು ಯೋಚನೆ ಮಾಡಬೇಕು. ಅಂತಹವನ್ನು ಸರಿಯಾರಿ ವಾರ್ನ್ ಮಾಡಬೇಕು. ಯಾರನ್ನೂ ಬಲಿಪಶುವನ್ನಾಗಿ ಮಾಡಬಾರದು ಯಾರು ಪ್ರಚೋದನೆ ಮಾಡುತ್ತಾರೆ, ಅದರ ಬಗ್ಗೆ ನಿಜವಾದ ಮಾಹಿತಿಯನ್ನು ತೆಗೆದುಕೊಂಡು ಎರಡು ಗುಂಪುಗಳಲ್ಲಿ ಮೂಲಭೂತವಾಗಿ ಪ್ರಚೋದನೆ ಮಾಡುತ್ತಾರೆ ಅಂಥವರನ್ನು ಗಡೀ ಪಾರು ಮಾಡುವ ಆಜ್ಞೆಯನ್ನು ಹೊರಡಿಸಿದ್ದರೆ ಈ ಗಾಯ ಮಾಯುವುದಿಲ್ಲ. ಮತ್ತು ಗಾಯಗೊಂಡವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ನಾನು ಆಗಲೇ ಹೇಳಿದ ಪ್ರಕಾರ ತಾವು ಆಶ್ವಾಸನೆಯನ್ನು ಶಾಂತಿ ಸಮಿತಿಯಲ್ಲಿ ಕೊಡುತ್ತೀರಿ, ಅದನ್ನು ಅನುಷ್ಠಾನಕ್ಕೆ ತರುವುದು ಒಂದು ಕಡೆ ಆಗುತ್ತದೆ. ಬೆಳಿಗ್ಗೆ ಬಂದಿರುವ ವರದಿ ಪ್ರಕಾರ ಇವೊತ್ತಿಗೂ ಕೂಡ ಯಾವುದೇ ಪ್ರಯೋಜನ ಆಗಿಲ್ಲ. ನಾಳೆ ರಂಜಾನ್ ಹಬ್ಬ ಆಗುತ್ತದೆ. ಐದು ಪ್ಲಾಟೂನ್ ಪೋಲೀಸ್ ಫೋರ್ಸ್ ಅನ್ನು ಕಳಿಸಿದ್ದೇವೆಂದು ಹೇಳಿಕೆ ಕೊಟ್ಟಿದ್ದೀರಿ. ಆದರೆ ನನಗೆ ಬೆಳಿಗ್ಗೆ ಬಂದ ವರ್ತಮಾನದ ಪ್ರಕಾರ ಇವೊತ್ತಿಗೂ ಕೂಡ ಶಿಡ್ಲಘಟ್ಟ ಮತ್ತು ಅಸುಪಾಸಿನ ಪ್ರದೇಶದಲ್ಲಿ ಪೋಲೀಸ್ ಬಂದಿಲ್ಲವೆಂದು ತಿಳಿದು ಬಂದಿದೆ. ಯಾಕೆಂದರೆ ಜನರಲ್ಲಿ ಒಂದು ಮನೋಸ್ಥೈರ್ಯ, ಕಾನ್‌ಫಿಡೆನ್ಸ್ ಮೂಡಬೇಕಾದರೆ ಅಲ್ಲಿ ಪೋಲೀಸ್ ಬಲ ಬೇಕಾಗುತ್ತದೆ. ಒಂದು ಕಡೆ ಗಲಾಟೆ ಆಗುತ್ತದೆ, ಆ ಒಂದು ಕಡೆ ಪೋಲೀಸರು ಕಾನ್‌ಸೆಂಟ್ರೇಟ್ ಮಾಡುತ್ತಾರೆ. ಅಲ್ಲಿ ಹೋಗಿ ಕಾಂಟಾಕ್ಟ್ ಮಾಡುತ್ತಾರೆ. ಅರು ಎಕರೆ ದ್ರಾಕ್ಷಿ ತೋಟವನ್ನು ಬುಡ ಸಮೇತ ಕತ್ತರಿಸಿ ಹಾಕಿದ್ದಾರೆ ಇಂತಹ ಪರಿಸ್ಥಿತಿ ಇದೆ. ಪರಿಸ್ಥಿತಿ ಗಂಭೀರವಾಗಿದೆ, ಭಯಾನಕವಾಗಿದೆ ಎಂದು ಹೇಳಿಕೆ ಕೊಟ್ಟಿದ್ದೀರಿ. ನಮ್ಮ ಸನ್ಮಾನ್ಯ ಮಿತ್ರರಾದ ಶ್ರೀ ಆರ್. ವೆಂಕಟರಾಮಯ್ಯನವರು ಹೇಳಿದರು, ಕೆಲವು ಕಡೆ ಗುಂಪು ಗಲಭೆಗಳು ನಡೆದಿವೆ, ಶಾಂತಿ ಸಮಿತಿಯಲ್ಲಿ ಅದಂತಹ ಘಟನೆಗಳ ಬಗ್ಗೆ ಪ್ರಚೋದನೆಗೆ ಅವಕಾಶ ಮಾಡಕೂಡದೆಂದು ಒಂದು ಆಪಾದನೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕು. ಇದನ್ನು ಮಾನ್ಯ ಮಂತ್ರಿಯವರು ಗಂಭೀರವಾಗಿ ಆಲೋಚನೆ ಮಾಡಿದರೆ ಇದರ ಬಗ್ಗೆ ಮುಂದೆ ಇಂತಹ ಘಟನೆಗಳು ನಡೆಯದ ಹಾಗೆ ಸರಿಯಾದಂತಹ ಒಂದು ಶಿಸ್ತು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಂತಹ ಘಟನೆಗಳಿಗೆ ಪ್ರಚೋದನೆ ಮಾಡತಕ್ಕಂಥವರನ್ನು ಗಡೀ ಪಾರು ಮಾಡತಕ್ಕಂಥ ಆಜ್ಞೆಯನ್ನು ಮಾಡಬೇಕು. ಅದಂತಹ ಗಾಯವನ್ನು ತಣ್ಣಗಾಗಿ ತಕ್ಕ ಒಂದು ವಿಷದವಾದ ಕಾರ್ಯಕ್ರಮವನ್ನು ಮಾಡಬೇಕು. ನಾಳೆ ರಂಜಾನ್ ಹಬ್ಬ ಇರುತ್ತದೆ. ಅಲ್ಲಿ Population is equally divided ಎಂದು ಹೇಳಿದ್ದೀರಿ. ಹೀಗಿರುವಾಗ ಇಂತಹ ಘಟನೆಗಳು ಗಂಭೀರ ಸ್ವರೂಪವನ್ನು ಪಡೆಯುತ್ತವೆ. ಅಲ್ಲಿ ಹೆಚ್ಚುವನ್ನು ಶಾಂತಿಯುತವಾಗಿ ನಡೆಸಲು ಏರ್ಪಾಡು ಮಾಡಬೇಕು. ನನ್ನ ಸೂಚನೆ ಈ ಸಂದರ್ಭದಲ್ಲಿ ಇಷ್ಟೇ. ಏನೆಂದರೆ ತಾವು ಸ್ವತಃ ಅಲ್ಲಿಗೆ ಹೋಗಬೇಕು. ಜನರನ್ನು ಕೇಳಬೇಕು, ಇನ್ನೂ ಮುಂದೆ ಶಿಡ್ಲಘಟ್ಟದಲ್ಲಿ ಯಾವುದೇ ರೀತಿಯ ಕೋಮವಾರು ಗಲಭೆಗಳು ಆಗದ ರೀತಿಯಲ್ಲಿ ಸರ್ಕಾರ ಮನೋಬಲವನ್ನು ಪ್ರದರ್ಶಿಸಬೇಕು. ಈ ಬಗ್ಗೆ ಒಂದು ಸರಿಯಾದ ಯೋಜನೆಯನ್ನು ರೂಪಿಸಬೇಕೆಂದು ಹೇಳುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟ್ ಮತ್ತು ಈ ಬಗ್ಗೆ ಅವರು ವ್ಯಕ್ತಪಡಿಸಿದ ಕಳಕಳಿಯ ಹಿನ್ನೆಲೆಯಲ್ಲಿ ನಾನು ಹೆಚ್ಚು ವಿವರವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ನಮ್ಮ ಪಕ್ಷದ ನಾಯಕರು ಈಗಾಗಲೇ ಹೇಳಿದಂತೆ ಈ ಹಿಂದು ಮುಸ್ಲಿಂ ಜನರಲ್ಲಿ ಒಗ್ಗಟ್ಟನ್ನು ಕಾಯಂವ ದೃಷ್ಟಿಯಿಂದ ನಮ್ಮ ಪಕ್ಷದ ಪರವಿಯಿಂದಲೂ ಸರ್ಕಾರಕ್ಕೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ. ಈ ಹಿಂದು ಮುಸ್ಲಿಂ ಗಲಭೆಯಾಗಲೀ ಅಥವಾ ಇನ್ನಿತರ ಗಲಭೆಗಳಾಗಲೀ ನಡೆದಾಗ ಕೇವಲ ಪೋಲೀಸರಿಂದಲೇ ಸಂಪೂರ್ಣವಾಗಿ ಹತೋಟಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥಾದ್ದನ್ನು ತಡೆಗಟ್ಟಬೇಕಾದರೆ ಇಂಟಲಿಜೆನ್ಸ್ ಸೆಲ್ ಸ್ಟ್ರಾಂಗ್ ಆಗಿರಬೇಕು. ಅದು ಚೆನ್ನಾಗಿ ಕೆಲಸ ಮಾಡಬೇಕಾದರೆ ಸರ್ಕಾರದವರು ಎಲ್ಲ ರೀತಿಯಲ್ಲಿ

ಸೌಲಭ್ಯಗಳನ್ನು ಹಾಗೂ ಸೌಕರ್ಯಗಳನ್ನು ಅದಕ್ಕೆ ಒದಗಿಸಿಕೊಡಬೇಕು. ನಮ್ಮ ಹಂಬ್ಬಳ್ಳಿಯಲ್ಲಿ ಇಂತಹ ಕೋಮು ಗಲಭೆ ನಡೆದ ಸಂದರ್ಭದಲ್ಲಿ ಇಂಟಲಿಜೆನ್ಸ್ ಸೆಲ್ ಬಹಳ ಚೆನ್ನಾಗಿ ಕೆಲಸ ಮಾಡಿತ್ತು. ಆದರೆ ಈಗ ಅದಕ್ಕೆ ಸರ್ಕಾರ ಯೋಗ್ಯ ರೀತಿಯ ಪುರಸ್ಕಾರವನ್ನು ಕೊಟ್ಟಂತೆ ನನಗೆ ಕಂಡುಬರುವುದಿಲ್ಲ. ಮುಖ್ಯವಾಗಿ ಪೋಲೀಸ್ ಇಲಾಖೆಯನ್ನು ಯೋಗ್ಯ ರೀತಿಯಿಂದ ಬದಲಾವಣೆ ಮಾಡಬೇಕು. ಅದು ಯೋಗ್ಯ ರೀತಿಯಿಂದ ಕೆಲಸ ಮಾಡಲು ಎಲ್ಲ ರೀತಿಯ ಅನುಕೂಲಗಳನ್ನು ಅದಕ್ಕೆ ಒದಗಿಸಬೇಕು. ಆಗ ಮಾತ್ರ ಇಂತಹ ಗಲಭೆಗಳನ್ನು ನಡೆಯದಂತೆ ನೋಡಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತದೆ. ಇಂತಹ ಗಲಭೆಗಳನ್ನು ತಡೆಗಟ್ಟುವ ವಿಚಾರದಲ್ಲಿ ಯಾರೂ ಸಹ ಪಕ್ಷಪಾತದಿಂದ ನೋಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಅಲ್ಲಿಗೆ ಹೋಗಿ ಜನರಿಗೆ ಸಮಾಧಾನ ಹೇಳಿದರೆ ಬಹಳ ಒಳ್ಳೆಯದಾಗುತ್ತದೆಂದು ನನ್ನ ಅನಿಸಿಕೆ.

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಅಲ್ಲಿನ ಪೋಲೀಸ್ ಅಧಿಕಾರಿಗಳ ದುರ್ನಡತೆಯಿಂದ ಇದು ನಡೆದಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಕಳೆದ ಎರಡು ವರ್ಷಗಳಿಂದ ಇಂತಹ ಗಲಭೆ ಅಲ್ಲಿ ನಡೆಯುತ್ತಿದ್ದರೂ ಸಹ ಪೋಲೀಸ್ ಅಧಿಕಾರಿಗಳಾಗಲೀ, ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರಾಗಲೀ ಯಾವುದೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲಿನ ಪೋಲೀಸ್ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ, ಜನರು ಸಣ್ಣಪುಟ್ಟ ಜಗಳ ಬಗ್ಗೆ ಪುಕಾರುಗಳನ್ನು ಕೊಟ್ಟರೆ ಅದನ್ನು ಪೋಲೀಸರು ದಾಖಲು ಮಾಡಿಕೊಂಡು ತನಿಖೆ ಮಾಡಲು ಹೋಗದ ಕಾರಣ ಈ ಒಂದು ಗಲಭೆ ನಡೆಯಲು ಕಾರಣವಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಉತ್ತರ ಏನಿದೆ, ಅದು ಅಷ್ಟು ಸರಿಯಾಗಿಲ್ಲ.

ಅಧ್ಯಕ್ಷರು.—ಬೇರೆಯವರೆಲ್ಲಾ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವೂ ಸಹ ಸಲಹೆಗಳನ್ನು ಕೊಡಿ. ಉತ್ತರ ಸರಿಯಿಲ್ಲ ಎಂದು ಏತಕ್ಕೆ ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರವರಿಗೆ ತಿಳಿದಂತೆ ಮಾತನಾಡುತ್ತಾರೆ. ಈ ಬಗ್ಗೆ ತಾವು ಏತಕ್ಕೆ ಸರ್ಟಿಫಿಕೇಟ್ ಕೊಡುತ್ತೀರಿ ?

ಅಧ್ಯಕ್ಷರು.—ನೀವೂ ಸಹ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಬ್ಬರು ಮಾತನಾಡುವಾಗ ಅವರ ಧಾಟಿಯಲ್ಲಿ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕೇ ಹೊರತು ತಾವು ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಹೋಗಬೇಡಿ, ಇಲ್ಲಿ ಮಾತನಾಡಲು ನಮಗೆ ನಿಮ್ಮ ಸರ್ಟಿಫಿಕೇಟ್ ಬೇಡ,

ಶ್ರೀ ಡಿ.ಎ. ಚಿನ್ನಪ್ಪ.—ಇಲ್ಲಿ ನಾವು ಮಾತನಾಡಲು ತಾವು ಅಡ್ಡಿ ಪಡಿಸಿದರೆ ಹೇಗೆ ? ಪೋಲೀಸರು ಮುಂಜಾಗ್ರತಾ ಕ್ರಮ ತೆಗೆದುಕೊಂಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಈ ಘಟನೆ ನಡೆದ ಮೇಲೆ ಪೋಲೀಸರು ಸುಮಾರು ಇನ್ನೂರಂ ಸಾವ್ಕೆಯಷ್ಟು ಗುದ್ದಲಿ, ಬಡಿಗೆ, ಕತ್ತಿಗಳನ್ನು ಜನರ ಹತ್ತಿರ ಇದ್ದುದನ್ನು ಪತ್ತೆ ಮಾಡಿ ವಸೂಲಿ ಮಾಡಿದ್ದಾರೆ. ಈ ಬಗ್ಗೆ ಅವರು ಮೊದಲೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದರೆ ಇಂತಹ ದೊಡ್ಡ ಗಲಭೆ ನಡೆಯುತ್ತಿರಲಿಲ್ಲ. ಗಲಭೆಗಳಲ್ಲಿ ನೊಂದವರಿಗೆ ಪೂರ್ಣ ರಕ್ಷಣೆ ಕೊಡಬೇಕು ಈಗ ಮಾತ್ರವಲ್ಲ, ಮುಂದಕ್ಕೂ ಸಹ ರಕ್ಷಣೆ ಕೊಡಬೇಕು. ತಾತ್ಕಾಲಿಕವಾಗಿ ರಕ್ಷಣೆ ಕೊಡುವುದಕ್ಕೆ ಬದಲು ಎಲ್ಲ ಕಾಲಕ್ಕೂ ಸಂಪೂರ್ಣವಾದ ರಕ್ಷಣೆ ಕೊಡಬೇಕು, ಶಾಂತಿ ಸಮಿತಿಯನ್ನು ರಚಿಸಬೇಕು, ಅಲ್ಲಿ ಒಳ್ಳೆಯ ಜನರು ಇರುವಂತೆ ನೋಡಿಕೊಳ್ಳಬೇಕು. ತೊಂದರೆ ಉಂಟುಮಾಡುವಂತಹ ಜನರನ್ನು ಅದರಲ್ಲಿ ಸೇರಿಸಬಾರದು. ಸರಿಯಾದ ಜನರನ್ನು ಅದರಲ್ಲಿ ಇಡಬೇಕು ಮುಖ್ಯವಾಗಿ ಅಲ್ಲಿ ಶಾಂತ ವಾತಾವರಣ ನಿರ್ಮಾಣವಾಗಬೇಕು. ಗೃಹ ಮಂತ್ರಿಗಳೂ ಆದಂಥ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಕಣ್ಣಾರೆ ಪರಿಸ್ಥಿತಿಯನ್ನು ನೋಡಿದ ನಂತರ ಇಲ್ಲಿ ಬೇಕೆ ಸ್ಟೇಟ್‌ಮೆಂಟ್ ಮಾಡಬೇಕು. ಅಲ್ಲಿನ ನಿಜವಾದ ಪರಿಸ್ಥಿತಿಯನ್ನು ನೋಡಿಕೊಂಡುನೊಂದವರಿಗೆ ಹೆಚ್ಚು ಪರಿಹಾರ ಕೊಡಬೇಕು. ಆಸ್ತಿಯಲ್ಲಿರುವವರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮುಖ್ಯಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ರಾಮಪ್ಪ. —ಮಾನ್ಯ ಅಧ್ಯಕ್ಷರೇ, ನಾನು ಸ್ವಲ್ಪ ಇದರ ಬಗ್ಗೆ ಹೇಳಬೇಕಾಗಿದೆ.

ಅಧ್ಯಕ್ಷರು,—ಆಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ನಿಯಮದಲ್ಲಿ ಏನು ಹೇಳಿದೆ ಎಂದರೆ.—

"There shall be no debate on such statement at the time it is made but each member in whose name the item stands in the list of business may, with the permission of the Speaker ask a question :

Provided that names of not more than five members shall be shown in the list of business."

ಈ ನಿಯಮದ ಪ್ರಕಾರ ೫ ಜನ ಮಾನ್ಯ ಸದಸ್ಯರ ಹೆಸರುಗಳನ್ನು ಸೇರಿಸಲಾಗಿದೆ. ಏಳೆಂಟು ಮಂದಿ ಸಹಿ ಹಾಕಿದರೆ ಅಷ್ಟೂ ಜನಕ್ಕೂ ಇಲ್ಲಿ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ಈಗ ಮಾತನಾಡಿದವರೆಲ್ಲಾ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅದಕ್ಕೆ ಮುಖ್ಯಮಂತ್ರಿಗಳು ಈಗ ಉತ್ತರ ಕೊಡುತ್ತಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ.. ನನಗೆ ಮಾತನಾಡಲು ಸ್ವಲ್ಪ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಆಗುವುದಿಲ್ಲ. ನಾನು ನಿಯಮ ಬಿಟ್ಟು ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ,—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಕೆಲವು ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಧನ್ಯವಾದವನ್ನು ಕೊಡುತ್ತೇನೆ. ನಾನು ಮೊದಲೇ ಹೇಳಿದೆ, ಈ ವಿಚಾರದಲ್ಲಿ ಚರ್ಚೆ ಏನೂ ಬೇಕಾಗಿಲ್ಲ. ಈಗ ಪರಿಸ್ಥಿತಿ ಹತೋಟಿಯಲ್ಲಿ ಬಂದಿದೆ, ಶಾಂತಿ ಸ್ಥಾಪನೆಯಾಗಿದೆ, ಅಲ್ಲೊಂದು, ಇಲ್ಲೊಂದು ಕಲ್ಲು ಒಗೆಯುತ್ತಿರುವಂಥವನ್ನು ಇವತ್ತು ಬೆಳಿಗ್ಗೆ, ನಿನ್ನೆ ರಾತ್ರಿ ನಡೆಯಿತು, ಅದು ಇವತ್ತು ನಿಂತಿದೆ. ಮಾನ್ಯ ಖಾರ್ಗೆಯವರು ನಿಷೇಕರ್ಫ್ಯೂ ಹಾಕಿದ್ದೀರಿ ಎಂದು ಹೇಳಿದರು, ಕರ್ಫ್ಯೂ ಹಾಕಿಲ್ಲ. ಅಲ್ಲಿ ಗಲಭೆಯನ್ನು ಜಾರಿಗೆ ತಂದಿದ್ದೇವೆ ಮತ್ತು ಇನ್ನೂ ಹೆಚ್ಚು ಪೋಲೀಸ್ ಫೋರ್ಸನ್ನು ನಾವು ಕಳಿಸಿದ್ದೇವೆ, ಸಶಸ್ತ್ರಿಯಂಟ್ ಪೋಲೀಸ್ ಫೋರ್ಸನ್ನು ಕಳಿಸುತ್ತಿದ್ದೇವೆ. ನಾಳೆ ಮುಂದೆ ಶಾಂತವಾದಂಥ ವಾತಾವರಣ ಆಗಬೇಕು ಎನ್ನುವಂಥ ಉದ್ದೇಶದಿಂದ. ಮಾನ್ಯ ಸದಸ್ಯರು ಅನೇಕರು ಇದು ಎರಡು ವರ್ಷಗಳಿಂದ ನಡೆಯುತ್ತಿತ್ತು, ಏನೂ ಮಾಡಲಿಲ್ಲ ಎಂದು ಹೇಳಿದರು, ಅದು ಸರಿಯಲ್ಲ ನಾವು ಅಧಿಕಾರಿಗಳ ಮುಖಾಂತರ ಮತ್ತು ಅಧಿಕಾರೇತರರ ಮುಖಾಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. ಒಳ್ಳೆಯ ವಾತಾವರಣ ಉಂಟು ಮಾಡಲಿಕ್ಕೆ. ಇದಕ್ಕಿಂತ ಬಹಳ ಭಯಾನಕವಾದಂಥ ಘಟನೆ ಆಗುವಂಥ ಸಂಭವವಿತ್ತು. ಅಲ್ಲಿ ಸ್ಥಾನಿಕ ಶಾಸಕರು ಇದರಲ್ಲಿ ವಿಶೇಷವಾದಂಥ ಆಸಕ್ತಿ ವಹಿಸಿ ಮಾಡಿದ್ದಾರೆ ಮತ್ತು ಈಗಲೂ ಕೂಡ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಶಾಸಕರು ಮುನಿಸಿಪಲ್ ಪ್ರೆಸಿಡೆಂಟರು, ಜಿಲ್ಲಾ ಪರಿಷತ್ತಿನವರು ಎಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮುನಿಸಿಪಲ್ ಪ್ರೆಸಿಡೆಂಟರು ನನ್ನನ್ನು ಭೆಟ್ಟಿಯಾಗಿದ್ದರು, ಶಾಸಕರೂ ಭೆಟ್ಟಿಯಾಗಿದ್ದರು, ಇನ್ನಿತರ ಮುಸಲ್ಮಾನ್ ಧುರೀಣರೂ ಭೆಟ್ಟಿಯಾಗಿದ್ದರು ನಾನು ಚಿಂತಾಮಣಿಗೆ ಹೋದಾಗ.

ಶ್ರೀ ಆರ್. ವೆಂಕಟರಾಮಯ್ಯ.—ಮುನಿಸಿಪಲ್ ಪ್ರೆಸಿಡೆಂಟರು.....

ಶ್ರೀ ರಾಮಕೃಷ್ಣ ಹೆಗಡೆ.—ನೀವೇನು ಹೊಸಬರೇ, ಮಾತನಾಡುವಾಗ ಮಧ್ಯದಲ್ಲಿ ಬಾಯಿ ಹಾಕಿದರೆ ಹೇಗೆ. ನೀವು ವಕೀಲರು, ಅನುಭವ ಇದೆ, ಇದು ಪಾರ್ಲಿಮೆಂಟರಿ ಪ್ರೊಸೀಜರೇ ಮಾತನಾಡುವಾಗ ಮಧ್ಯೆ ಮಧ್ಯೆ ಬಾಯಿ ಹಾಕುವುದು ನನಗೆ ಅರ್ಥವಾಗುವುದಿಲ್ಲ. ಹೊಸ ಸದಸ್ಯರಾದರೇ ಏನೋ ಅನ್ನಬಹುದು.

ಅಧ್ಯಕ್ಷರು.—ನೀವು ಬಿ.ಎ, ಬಿ.ಎಲ್. ಮಾಡಿಕೊಂಡಿದ್ದೀರಿ, ಹೆಸರಾಂತ ವಕೀಲರು,

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಏನಾದರೂ ಸಂದೇಹ ಇದ್ದರೆ ಆಮೇಲೆ ಪ್ರಶ್ನೆ ಕೇಳಿದರೆ ಹೇಳಬಹುದು. ಮಾತನಾಡುವಾಗ ನಮ್ಮ ತಲೆಯಲ್ಲಿ ಏನೋ ವಿಚಾರಗಳು ಬರುತ್ತವೆ, ಮಧ್ಯೆ ಬಾಯಿ ಹಾಕಿದರೆ ಹೊರಟು ಹೋಗುತ್ತದೆ. ಆಮೇಲೆ ನಾನು ಅಲ್ಲಿಗೆ ಹೋಗಬೇಕಾಗಿತ್ತು ಎಂದೂ ಹೇಳಿದರು. ನಾನು ಸ್ವತಃ ಹೋಗಲಿಕ್ಕೆ ಆಕ್ಷೇಪ ಇಲ್ಲ, ಇವತ್ತು ಬೆಳಿಗ್ಗೆ ನಮ್ಮ ಕೊಲೀಗ್ಸನ್ನು ಕಳಿಸಿಕೊಟ್ಟಿದ್ದೇನೆ, ಅವರು ಬಂದು ಇನ್ನೂ ಪರಿಸ್ಥಿತಿ ಸಂಧಾರಿಸಿಲ್ಲ, ನೀವು ಹೋದರೆ ಒಳ್ಳೆಯದೂ ಎಂದು ಹೇಳಿದರೆ ನಾನು ಸ್ವತಃ ಹೋಗುತ್ತೇನೆ. ಘಟನೆಯಾದ ತಕ್ಷಣ ಎಲ್ಲಾ ಕಡೆಗೂ ಮುಖ್ಯಮಂತ್ರಿ, ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಮೂರನೇ ವಿಚಾರವೆಂದರೆ, ಮಾನ್ಯ ಖಾರ್ಗೆಯವರು ಶ್ರೀಮತಿ ನಾಗರತ್ನಮ್ಮನವರು ಆಸ್ಪತ್ರೆಯಲ್ಲಿದ್ದಂತಹವರಿಗೆ ಏನು ಪರಿಹಾರ ಕೊಡುತ್ತೀರಿ ಎಂದು ಕೇಳಿದರು. ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಯಾರು ಇದರಲ್ಲಿ ನೊಂದಿದ್ದಾರೋ ಅವರಿಗೆ ಮತ್ತು ಯಾರು ಆಸ್ಪತ್ರೆಯನ್ನು ಕಳೆದುಕೊಂಡಿದ್ದಾರೋ ಅವರಿಗೂ ಕೂಡ, ನಾವು ಕಳೆದ ಒಂದೂವರೆ ವರ್ಷದ ಹಿಂದೆ ಕಾಂಪನ್ಸೇಷನ್ ಕೊಡತಕ್ಕಂಥ ಅಮೌಂಟನ್ನು ಹೆಚ್ಚು ಮಾಡಿದ್ದೇವೆ, ಸ್ಕೇಲನ್ನು ಹೆಚ್ಚು ಮಾಡಿದ್ದೇವೆ, ಅದರ ಪ್ರಕಾರ ಕೊಡುತ್ತೇವೆ. ಆದ್ದರಿಂದ ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಬೇಕಾಗಿಲ್ಲ ಎಂದು ಅನ್ನಿಸುತ್ತದೆ,

೨) ಮೈಸೂರು ಜಿಲ್ಲೆಯ ನಂಜನಗೂಡು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ಮಂತ್ತು ಇತರ ತಾಲ್ಲೂಕುಗಳಲ್ಲಿ ರೈತರಿಗೆ ಹತ್ತಿ ಮತ್ತಿತರ ಬೀಜಗಳು ದೊರಕದೆ ತೊಂದರೆಗೆ ಒಳಗಾಗಿರುವ ಬಗ್ಗೆ ಹಾಗೂ ಬಿತ್ತನೆ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವ ಬಗ್ಗೆ.—

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿರುವ ನಂಜನಗೂಡು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ಮತ್ತು ಇತರ ತಾಲ್ಲೂಕುಗಳಲ್ಲಿ ರೈತರಿಗೆ ಹತ್ತಿ ಮತ್ತಿತರ ಬೀಜಗಳು ದೊರಕದೆ ತೊಂದರೆಗೆ ಒಳಗಾಗಿರುವ ಬಗ್ಗೆ ಹಾಗೂ ಬಿತ್ತನೆ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವ ಬಗ್ಗೆ ಮಾನ್ಯ ಕೃಷಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಮಾನ್ಯ ಕೃಷಿ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

೧೯೮೭-೮೮ನೇ ಸಾಲಿನಲ್ಲಿ ಅತೀ ಉದ್ದ ಎಳೆಯ ಹತ್ತಿಯಾದ ಡಿ.ಸಿ.ಹೆಚ್-೩೨ ಹತ್ತಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದ್ದುದರಿಂದ ೧೯೮೮-೮೯ನೇ ಸಾಲಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಈ ಬೆಳೆಯನ್ನು ತೆಗೆದ ಕೊಳ್ಳಲು ಮುಂದೆ ಬಂದಿರುತ್ತಾರೆ. ಈ ಕಾರಣದಿಂದ ನಿರೀಕ್ಷಿಸಿದ ಬೇಡಿಕೆಗಿಂತ ಹೆಚ್ಚಿನ ಬೇಡಿಕೆ ಈ ತಳಿಯ ಹತ್ತಿ ಬೀಜಕ್ಕೆ ಈ ಸದರಿ ಸಾಲಿನಲ್ಲಿರುತ್ತದೆ.

ಈ ಹಿಂದಿನ ಸಾಲಿನಲ್ಲಿದ್ದ ಬೇಡಿಕೆ ಮತ್ತು ಪೂರಾಟವಾದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ೧೯೮೮-೮೯ನೇ ಸಾಲಿನಲ್ಲಿ ಸರಬರಾಜು ಮಾಡಲು ಕರ್ನಾಟಕ ರಾಜ್ಯ ಬೀಜ ನಿಗಮವು ಒಟ್ಟು ೨,೨೬೦ ಕ್ವಿಂಟಾಲ್‌ನಷ್ಟು ಪ್ರಮಾಣಿತ ಡಿ.ಸಿ.ಹೆಚ್-೩೨ ಹತ್ತಿ ಬೀಜವನ್ನು ೧೯೮೭-೮೮ರಲ್ಲಿ ಉತ್ಪಾದಿಸುವ ಗುರಿ ಹೊಂದಿತ್ತು. ಆದರೆ ಹವಾಮಾನದ ವೈಪರೀತ್ಯದಿಂದಾಗಿ ಮತ್ತು ಬೀಜೋತ್ಪಾದಕರು ಪೂರ್ಣ ಪ್ರಮಾಣದ ಉತ್ಪಾದನೆಯನ್ನು ಬೀಜ ನಿಗಮಕ್ಕೆ ಒಪ್ಪಿಸಿಲ್ಲವಾದ್ದರಿಂದ ೧,೬೪೮ ಕ್ವಿಂಟಾಲ್ ನಷ್ಟು ಪ್ರಮಾಣಿತ ಬೀಜ ಮಾತ್ರ ಲಭ್ಯವಾಗಿರುತ್ತದೆ. ಇದರಿಂದ ಬೀಜ ನಿಗಮವು ೧೯೮೮-೮೯ನೇ ಸಾಲಿನ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಿರುವುದಿಲ್ಲ. ೧೯೮೮-೮೯ನೇ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ಕರ್ನಾಟಕ ರಾಜ್ಯ ಬೀಜ ನಿಗಮವು ೪೨೪ ಕ್ವಿಂಟಾಲ್‌ನಷ್ಟು ಡಿ.ಸಿ.ಹೆಚ್-೩೨ ಮತ್ತು ೨೫.೦೦ ಕ್ವಿಂಟಾಲ್‌ನಷ್ಟು ವರಲಕ್ಷ್ಮಿ ಹತ್ತಿ ಬೀಜವನ್ನು ಆಸುಗೆ ಮಾಡಿರುತ್ತದೆ.

ರಾಜ್ಯದಲ್ಲಿ ಹತ್ತಿ ಬೀಜದ ಉತ್ಪಾದನೆಯ ಕೊರತೆ ಇದ್ದ ಮೂಲಕ ಪ್ರಮಾಣಿತ ಹತ್ತಿ ಬೀಜವನ್ನು ನೆರೆ ರಾಜ್ಯದ ಬೀಜ ನಿಗಮಗಳಿಂದ ತರುವ ವ್ಯವಸ್ಥೆ ಮಾಡಲಾಗಿದೆ ಮತ್ತು ಖಾಸಗಿ ಸಂಸ್ಥೆಗಳಿಗೂ ಸಹ ಪ್ರಮಾಣಿತ ಬೀಜ ತರಲು ಅನುಮತಿ ಕೊಡಲಾಗಿದೆ.